ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 7 ಫೆಬ್ರವರಿ 16, 1986 ಬೆಲೆ 60 ಪೈಸೆ

ಒಳಗೇನಿದೆ....

ಈ ಬೆಲೆ ಏರಿಕೆ ಏಕೆ ಪುಟ 3

ಕುಂದಾಪುರದಲ್ಲಿ ಚರಿತ್ರಾರ್ಹ ಸಭೆ ಪುಟ 8

ಅಣ್ವಸ್ತ್ರರಹಿತ ವಿಶ್ವವನ್ನು ಸಾಧಿ ಸೋಣ – ಗೊರ್ಬಚೆವ್ ಪುಟ 7

ಶಿಕ್ಷಣದ ಸಮಸ್ಯೆಗಳಿಗೆ ಎಸ್.ಎಫ್.ಐ. ಉತ್ತರ ಪುಟ 4

ಕೈಗಾರಿಕೆಯ ರಾಷ್ಟ್ರೀಕರಣ –ಲೆನಿನ್ ಪುಟ 2

ರೇಗನ್ನರ ಅಭಿಪ್ರಾಯ ಪುಟ 2

ಹೆಗ್ಡೆಯವರ ರಾಜೀನಾಮೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಸೆಕ್ರೆಟರಿಯೇಟ್ 13.2.1986 ರಂದು ಸಭೆ ಸೇರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ದಿಢೀರನೆ ಆಶ್ಚರ್ಯಕರವಾಗಿ ಕೊಟ್ಟ ರಾಜೀನಾಮೆಯಿಂದಾಗಿ ಉದ್ಭವಿಸಿದ ಪರಿಸ್ಥಿತಿಯನ್ನು ಪರಿಶೀಲಿಸಿ, ಈ ಕೆಳಗಿನ ಹೇಳಿಕೆಯನ್ನು ಪ್ರಕಟಿಸಲು ನಿರ್ಧರಿಸಿತು.

ಶ್ರೀರಾಮಕೃಷ್ಣ ಹೆಗ್ಡೆಯವರು ಮುತುವರ್ಜಿ ವಹಿಸಿ ದಕ್ಷಿಣ ವಲಯದ ಮುಖ್ಯಮಂತ್ರಿಗಳ ಸಮ್ಮೇಳನವನ್ನು ನಡೆಸಿ ನಮ್ಮ ಸಂವಿಧಾನದ ಫೆಡರಲ್ ರಚನೆಯ ಕುರಿತು ದೃಷ್ಟಿ ಹರಿಸುವಂತೆ ಮಾಡಿದರು, ರಾಜ್ಯಗಳಿಗೆ ಅಧಿಕ ಸಂಪನ್ಮೂಲಗಳು ಅವಶ್ಯವೆಂದು ತೋರಿಸಿದರು. ಮತ್ತು ಕೇಂದ್ರ ರಾಜ್ಯಗಳ ನಡುವಿನ ಸಂಬಂಧದಲ್ಲಿ ಬದಲಾವಣೆಯ ಅವಶ್ಯಕತೆಯನ್ನು ಸೂಚಿಸಿದರು.

ಹೆಗ್ಡೆಯವರ ಈ ಪಾತ್ರವನ್ನು ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕೊಂಡಾಡಿವೆ.

ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷಗಳ ಮುಖಂಡರ ಸಮಾವೇಶಗಳಲ್ಲಿ ಶ್ರೀರಾಮಕೃಷ್ಣ ಹೆಗಡೆಯವರು ಭಾಗಿಯಾಗಿ ಅಲ್ಲಿ ನಡೆದ ಚರ್ಚೆಗಳಲ್ಲಿ ಪಾಲ್ಗೊಂಡಿದ್ದರು.

ಆದಕಾರಣ ಜನತಾ ಪಕ್ಷದ ಸರಕಾರದ ಮುಖ್ಯಸ್ಥನಾಗಿ ಶ್ರೀರಾಮಕೃಷ್ಣ ಹೆಗಡೆಯವರು ಇರುವುದು ಅದು ಕೇಂದ್ರ ಸರಕಾರವು ನಿತ್ಯೋಪಯೋಗಿ ವಸ್ತುಗಳ ಆಡಳಿತ ಬೆಲೆಗಳನ್ನು ಹೆಚ್ಚಿಸಿ ಜನಸಾಮಾನ್ಯರ ಮೇಲೆ ಹೊರೆಹಾಕುವ ಈ ಸಮಯದಲ್ಲಿ, ಆ ಎಲ್ಲಾ ಹಣವನ್ನು ಕೇಂದ್ರ ಸರಕಾರವೇ ಕಬಳಿಸಲು ಹೊಂಚು ಹಾಕಿರುವ ಈ ಸಮಯದಲ್ಲಿ, ಬಹಳ ಆವಶ್ಯಕವಾಗಿದೆ.

(8ನೇ ಪುಟ ನೋಡಿ)

ದೇಶದೆಲ್ಲೆಡೆ ಪ್ರತಿಭಟನೆ, ಬಂದ್‌ಗಳು

ಕರ್ನಾಟಕದಲ್ಲಿ ಫೆ. 19 ರಂದು ರಾಜ್ಯವ್ಯಾಪಿ ಪ್ರತಿಭಟನೆ

ಫೆಬ್ರವರಿ 6, 7 ರಂದು ಮಂಗಳೂರಿನಲ್ಲಿ ಸೇರಿದ್ದ ಪಕ್ಷದ ರಾಜ್ಯ ಸಮಿತಿಯು ಕರ್ನಾಟಕದಲ್ಲಿ ಪಕ್ಷದ ಘಟಕಗಳೆಲ್ಲಾ ಸಾಮೂಹಿಕ ಸಂಘಟನೆಗಳಿಗೆ ನೇತೃತ್ವ ನೀಡಿ ಫೆ. 19 ರಂದು ರಾಜ್ಯವ್ಯಾಪಿಯಾಗಿ ಪ್ರತಿಭಟನಾ ಮೆರವಣಿಗೆ, ಸಭೆಗಳನ್ನು ನಡೆಸಬೇಕೆಂದು ಕರೆ ನೀಡಿದೆ. ಈ ಹಿಂದೆ ಐಕ್ಯರಂಗದಲ್ಲಿ ಪ್ರಕಟವಾಗಿದ್ದಂತೆ ದಿನಾಂಕ 17-2-86 ಎಂಬುದು ಮಾರ್ಪಾಟಾಗಿ 19-2-86 ಆಗಿದೆ ಎಂಬುದನ್ನು ಪಕ್ಷದ ಎಲ್ಲಾ ಘಟಕಗಳು ಗಮನಿಸಬೇಕು.

ದೇಶದೆಲ್ಲೆಡೆ ಮೆರವಣಿಗೆ, ಸಭೆಗಳು, ರಾಜ್ಯವ್ಯಾಪಿ ಬಂದ್‌ಗಳು ನಡೆದು ಯಶಸ್ವಿಯಾಗಿವೆ. ಮತ್ತನೇಕ ರಾಜ್ಯಗಳಲ್ಲಿ ಯೋಜಿತವಾಗಿವೆ ಕಾರ್ಮಿಕ ಸಂಘಗಳ ಎಸ್.ಸಿ.ಸಿ. ದಿನಾಂಕ 20-2-86 ರಂದು ಅಖಿಲ ಭಾರತ ಪ್ರತಿಭಟನಾ ದಿನಾಚರಣೆಗೆ ಕರೆ ನೀಡಿದೆ. ಈ ಎಲ್ಲಾ ಪ್ರತಿಭಟನೆಗಳಲ್ಲಿ ಕಾರ್ಮಿಕ ವರ್ಗದ ನೇತೃತ್ವ ವಹಿಸಿದ ಸಿ.ಪಿ.ಐ. (ಎಂ) ಹಾಗೂ ಅದರ ಸಾಮೂಹಿಕ ಸಂಘಟನೆಗಳು ಜನತೆಯ ನೋವಿಗೆ ಪ್ರತಿಕ್ರಿಯಿಸುವುದರಲ್ಲಿ ಮುಂದಿವೆ ಕರ್ನಾಟಕದಲ್ಲಿ ಕೂಡ ಜನರ ಬದುಕಿಗೆ ಈ ಬೆಲೆ ಏರಿಕೆಗಳಿಂದ ಬಜೆಟ್ ರೂಪದಲ್ಲಿ ಮುಂದೆ ಬರಲಿರುವ ತೆರಿಗೆಗಳಿಂದ ಆಗುವ ಆಘಾತಕ್ಕೆ ಕಾರ್ಮಿಕ ವರ್ಗದ, ದುಡಿಯುವ ಜನಸಾಮಾನ್ಯರ ಬಲವಾದ ಪ್ರತಿಭಟನಾ ಧ್ವನಿಯನ್ನು ಮೊಳಗಿಸಬೇಕೆಂದು ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ದೆಹಲಿ, ಪ. ಬಂಗಾಳ, ತ್ರಿಪುರಗಳಲ್ಲಿ, ಯಶಸ್ವೀ ಬಂದ್

ಫೆ. 10 ರಂದು ದೆಹಲಿಯಲ್ಲಿ, 11 ರಂದು ಪ. ಬಂಗಾಳ, ತ್ರಿಪುರಾ ಹಾಗೂ ಉತ್ತರ ಪ್ರದೇಶದ ಕಾನ್‌ಪುರದಲ್ಲಿ ಬೆಲೆ ಏರಿಕೆ ವಿರುದ್ಧ ಎಡರಂಗ ಹಾಗೂ ಇತರ ಪ್ರಜಾಸತ್ತಾತ್ಮಕ ಶಕ್ತಿಗಳು ಸಂಘಟಿಸಿದ ಬಂದ್ ಸಂಪೂರ್ಣ ಯಶಸ್ವಿಯಾಗಿವೆ ಪಕ್ಷದ ಪಾಲಿಟ್‌ಬ್ಯೂರೊ, ಸಿ.ಐ.ಟಿ.ಯು. ಈ ಬಂದ್‌ಗಳನ್ನು

[8ನೇ ಪುಟ ನೋಡಿ]

ಮುಂದಿನ ಸಂಚಿಕೆಗಳು

23-2-86 ರ ಸಂಚಿಕೆಯಲ್ಲಿ

ರಾಜ್ಯದ ದಾರುಣ ಬರಗಾಲ ಪರಿಸ್ಥಿತಿಯ ಬಗ್ಗೆ, ಪ. ಬಂಗಾಳ ಎಡರಂಗ ಸರ್ಕಾರ ಬರಗಾಲವನ್ನೆದುರಿಸಿದ ಬಗ್ಗೆ ಲೇಖನಗಳು. ಎ.ಐ.ಕೆ.ಎಸ್. ನಿರ್ಣಯ, ಜನಪದಗೀತೆಗಳು.

2-3-86 ರ ಸಂಚಿಕೆಯಲ್ಲಿ

ಕನಿಷ್ಠ ಕೂಲಿ ಬಗ್ಗೆ 'ವಿಧಾನ ಸೌಧ ಚಲೊ' ಕಾರ್ಯಕ್ರಮಕ್ಕಾಗಿ ಕನಿಷ್ಠ ಕೂಲಿಯ ಬಗ್ಗೆ, ಅಸಂಘಟಿತ ಕಾರ್ಮಿಕರ ಬಗ್ಗೆ, ಬೀಡಿ ಕಾರ್ಮಿಕರ, ಪ್ಲಾಂಟೇಶನ್ ಕಾರ್ಮಿಕರ, ಹೆಂಚಿನ ಕಾರ್ಮಿಕರ ಬಗ್ಗೆ ಲೇಖನಗಳು.

ಹೆಚ್ಚಿನ ಪ್ರತಿಗಳು ಬೇಕಾದಲ್ಲಿ ಕೂಡಲೇ ಸಂಪರ್ಕಿಸಿ.

ಕೇರಳದಲ್ಲಿ ಪಕ್ಷದ ವಿದ್ಯಮಾನಗಳು

ಉಕ್ಕಿನಂತಹ ಶಿಸ್ತನ್ನು ಬಲಪಡಿಸಿರಿ - ಇ.ಎಂ.ಎಸ್.

"ಅದ್ವಿತೀಯ ನಿರ್ಣವನ್ನು ತಿಳಿಸಿದ ಅದ್ವಿತೀಯ ಹೇಳಿಕೆ" ಇದು ಕೇರಳ ರಾಜ್ಯ ಸಮಿತಿ ತ್ರಿವೇಂದ್ರಮ್‌ನಲ್ಲಿ ಎರಡು ದಿನಗಳ ಸಭೆಯ ನಂತರ ಬಿಡುಗಡೆ ಮಾಡಿದ ಹೇಳಿಕೆಯ ಬಗ್ಗೆ ಕೇರಳದ ಪತ್ರಿಕೆಗಳ ಅಭಿಪ್ರಾಯ.

ಸಿ.ಪಿ.ಐ (ಎಂ), ಪಕ್ಷದ ಹಲವು ಸನ್ಮಿತ್ರರ ಸಲಹೆಗೆ ವಿರುದ್ಧವಾಗಿ, ಅಧಿಕಾರದ ಗದ್ದುಗೆ ಏರಲು ಸಂದರ್ಭ ಸಾಧಕ ಕರಾಮತ್ತುಗಳಲ್ಲಿ ಭಾಗವಹಿಸಲು ಖಂಡತುಂಡವಾಗಿ ನಿರಾಕರಿಸಿದ್ದು —ಈ ನಿರ್ಣಯದ "ಅದ್ವಿತೀಯತೆ", ಅಧಿಕಾರದ ಗದ್ದುಗೆ ಏರುವುದೇ ಸರ್ವಸ್ವವಾಗಿರುವ ಬೂರ್ಜ್ವಾ ಪಕ್ಷಗಳಿಗೆ ಖಂಡಿತವಾಗಿಯೂ ಈ ನಿರ್ಣಯ ಅಸಾಮಾನ್ಯ ಅನಿಸಿರಬೇಕು.

ಭಾರತೀಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚರಿತ್ರೆಯ ಅರಿವು ಇದ್ದವರಿಗೆ ಮಾತ್ರ ನಮ್ಮ ಪಕ್ಷಕ್ಕೆ ಬೇರೆಯಾದ ಒಂದು ಮಾನದಂಡ, ವಿಚಾರಗಳು ಇವೆ ಎಂಬುದು ಗೊತ್ತಿರುತ್ತದೆ. ಉದಾಹರಣೆಗೆ, 1967 ರ ಚುನಾವಣೆಯ ಫಲವಾಗಿ ಬಿಹಾರ, ಉ. ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಕೈಬೆರಳೆಣಿಸುವಷ್ಟೇ ವಿಧಾನಸಭಾ ಸದಸ್ಯರಿದ್ದರೂ, ಸಿ.ಪಿ.ಐ. ಮಂತ್ರಿ ಪದವಿಯ ಮೇಲೆ ಮುಗಿಬಿದ್ದು ಬಳಸಿಕೊಂಡಿತು. ಅದೇ ಅವಕಾಶ ಸಿ.ಪಿ.ಐ. [ಎಂ] ಗೂ ಒದಗಿ ಬಂದಿದ್ದು, ಪಕ್ಷ ಅದನ್ನು ತಿರಸ್ಕರಿಸಿತು ಏಕೆಂದರೆ ಪಕ್ಷ ವಿಧಾನ ಸಭೆಯಲ್ಲಿ ಗಣನೆಗೆ ಬಾರದಷ್ಟು ಚಿಕ್ಕ ಸಂಖ್ಯೆಯಲ್ಲಿದ್ದುದರಿಂದ ಸರ್ಕಾರದ ನೀತಿಗಳನ್ನು ನಿರೂಪಿಸುವುದು ಸಾಧ್ಯವಿಲ್ಲವಾದರೂ ಕೂಡ ಸಂಭವಿಸುವ ಯಾವುದೇ ತಪ್ಪಿಗೆ ಹೊಣೆಯಾಗಬೇಕಾಗುತ್ತದೆ.

ಹಾಗೆಯೇ, 1977 ರ ಚುನಾವಣೆಗಳು ನಡೆಯುವ ಮೊದಲೇ ಚುನಾವಣೆ ನಡೆದ ನಂತರ ಜನತಾ ಪಕ್ಷ ಮಾಡುವ ಸರ್ಕಾರಕ್ಕೆ ಸಿ.ಪಿ.ಐ (ಎಂ) ಪೂರ್ಣ ಬೆಂಬಲ ನೀಡುತ್ತದೆ. ಆದರೆ ಈ ಸರ್ಕಾರದಲ್ಲಿ ಪಾಲುಗೊಳ್ಳಲು ಕರೆ ಬಂದರೂ ನಿರಾಕರಿಸುತ್ತದೆ – ಎಂದು ಪಕ್ಷ ಘೋಷಿಸಿತ್ತು. ಪುನಃ 1978 ರಲ್ಲಿ ಮಹಾರಾಷ್ಟ್ರ ಮತ್ತು ಅಸ್ಸಾಂಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳ ರಚನೆಯಾದಾಗಲೂ, ಸರ್ಕಾರದಲ್ಲಿ ಪಾಲುಗೊಳ್ಳಲು ಬಂದ ಕರೆಯನ್ನು ತಿರಸ್ಕರಿಸಿತು.

ಇದಕ್ಕೆ ತದ್ವಿರುದ್ಧವಾಗಿ ಸಿ.ಪಿ.ಐ. 1967ರಲ್ಲಿ ಜನಸಂಘದೊಟ್ಟಿಗೆ ಅಧಿಕಾರವನ್ನು ಹಂಚಿಕೊಂಡಿತು. ಹಾಗೆಯೇ ಕೇರಳದಲ್ಲಿ ಪೂರ್ಣ ಒಂದು ದಶಕದಷ್ಟು ಕಾಲ ಕಾಂಗ್ರೆಸ್‌ನೊಂದಿಗೆ ರಾಜ್ಯಭಾರ ಮಾಡಿತು. ಸರ್ಕಾರದ ನೀತಿಗಳನ್ನು ರೂಪಿಸುವ ಪರಿಸ್ಥಿತಿ ಇಲ್ಲದಾಗ, ತಾನು ಸರ್ಕಾರಗಳಲ್ಲಿ ಭಾಗವಹಿಸುವುದಿಲ್ಲವೆಂದು ಸಿ.ಪಿ.ಐ (ಎಂ) ಕಾರ್ಯತಃ ತೋರಿಸಿದೆ.

ಕೋಮುವಾದಿ ಪಕ್ಷಗಳ ಹುಟ್ಟು

ಬೂರ್ಜ್ವಾ ರಾಷ್ಟ್ರೀಯವಾದಿಗಳಿಗೆ ತತ್ವಶಃ "ಅಸ್ಪೃಶ್ಯ"ವಾಗಿರುವ ಜಾತಿ ಮತ್ತು ಕೋಮುವಾದಿ ಪಕ್ಷಗಳ ಬಗ್ಗೆ ಪಕ್ಷ ವಾಸ್ತವಿಕ ಧೋರಣೆ ಅನುಸರಿಸುತ್ತದೆ. ಜಾತಿ ಪದ್ಧತಿ ಬೇರು ಬಿಟ್ಟಿರುವ ಭಾರತದ ಸಮಾಜದಲ್ಲಿ ತುಳಿತಕ್ಕೊಳಗಾದ ಜಾತಿಗಳ ಜನತೆ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳು ಮೊದಲ ಹಂತಗಳಲ್ಲಿ ಜಾತಿ ಚಳುವಳಿ ಮತ್ತು ಸಂಘಟನೆಗಳಲ್ಲಿ ಆಕಾರ ಪಡೆಯುತ್ತವೆ. ಹಿಂದೂ ಬಹುಸಂಖ್ಯಾತ ಭಾರತೀಯ ಒಕ್ಕೂಟದಲ್ಲಿ ವಿವಿಧ ಅನಾನುಕೂಲತೆಗಳಿಂದ ಬಳಲುವ ಅಲ್ಪಸಂಖ್ಯಾತ ಧರ್ಮಗಳ ಜನರ – ವಿಶೇಷವಾಗಿ ಮುಸ್ಲಿಮರ – ಅಳಲು ಸಹ ಕೋಮುವಾದಿ ಚಳುವಳಿ ಮತ್ತು ಸಂಘಟನೆಗಳ ಮೂಲಕ ವ್ಯಕ್ತವಾಗುತ್ತವೆ ಜಾತಿ, ಕೋಮು ಸಂಘಟನೆ, ಚಳುವಳಿಗಳ ಬಗ್ಗೆ ಮಡಿವಂತಿಕೆ, ಜಾತಿ ಕೋಮುಗಳನ್ನು ಮೀರಿ ನಿಲ್ಲಬಲ್ಲ ಎಲ್ಲಾ ದುಡಿಯುವ ಜನರ ಐಕ್ಯ ಚಳುವಳಿಯನ್ನು ಬೆಳೆಸಲು ಯಾವುದೇ ರೀತಿಯಲ್ಲಿ ಸಹಾಯಕಾರಿಯಲ್ಲ. ಬದಲಾಗಿ ಇಂತಹ ಮಡಿವಂತಿಕೆ ಐಕ್ಯ ಚಳುವಳಿಗೆ ಮಾರಕವಾಗಬಲ್ಲದು.

ಆರೆಸ್ಸೆಸ್ ಪ್ರತಿನಿಧಿಸುವ ಹಿಂದೂ ಕೋಮುವಾದ ಸಾಮಾನ್ಯವಾಗಿ ಪ್ರತಿಗಾಮಿ ಮತ್ತು ದೇಶ ವಿರೋಧಿ ಚಳುವಳಿಯಾದರೂ, ಇಂದಿರಾಗಾಂಧಿ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಅದರ ಪಾತ್ರ ಗಮನಕ್ಕೆ ತೆಗೆದುಕೊಳ್ಳಬೇಕಾದ್ದು. [6ನೇ ಪುಟನೋಡಿ]

ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಕಾರ್ಮಿಕರ ನಿಯಂತ್ರಣ

– ವಿ. ಐ. ಲೆನಿನ್

ಭಾಗ 5 : ಸಮಾಜವಾದ - ಕಾರ್ಲ್ ಮಾರ್ಕ್ಸ್‌ರ ದೃಷ್ಟಿಯಲ್ಲಿ

ಟಿಪ್ಪಣಿ :

ಕಾರ್ಲ್‌ಮಾರ್ಕ್ಸ್‌ರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಲೆನಿನ್ ಜುಲೈ-ನವಂಬರ್, 1914ರಲ್ಲಿ ಬರೆದರು ಈ ಲೇಖನದ ಒಂದು ಭಾಗದಲ್ಲಿ ಕಾರ್ಲ್‌ಮಾರ್ಕ್ಸ್‌ರ ದೃಷ್ಟಿಯಲ್ಲಿ ಸಮಾಜವಾದದ ಕುರಿತು ಅತ್ಯಂತ ಸರಳವಾಗಿ ಲೆನಿನ್ ತಿಳಿಸಿದ್ದಾರೆ. ಬಂಡವಾಳಶಾಹಿ ಸಮಾಜದ ಗರ್ಭದಿಂದಲೇ ಸಮಾಜವಾದದ ಉದಯ, ಶ್ರಮಿಕ ವರ್ಗವೇ ಸಾಮಾಜಿಕ ಪರಿವರ್ತನೆಯ ಹರಿಕಾರ, ಉತ್ಪಾದನಾ ಸಾಧನವಿಧಾನಗಳು ಖಾಸಗೀ ಸ್ವಾಮ್ಯದಿಂದ ಸಾಮಾಜಿಕ ಸ್ವಾಮ್ಯಕ್ಕೆ ಪರಿವರ್ತನೆಗೊಳ್ಳುವ ಅನಿವಾರ್ಯತೆ, ಅಧಿಕ ಉತ್ಪಾದನೆ, ನ್ಯಾಯವಿತರಣೆ, ಕೃಷಿ – ಕೈಗಾರಿಕೆ ಹಾಗೂ ಗ್ರಾಮೀಣ – ನಗರಗಳೊಳಗಿನ ಅಸಮಾನತೆ ಹೋಗಲಾಡಿಸುವಿಕೆ, ಇತ್ಯಾದಿ ವಿಷಯಗಳ ಕುರಿತು ಲೆನಿನ್ ಸ್ಪಷ್ಟವಾಗಿ ತಿಳಿಸಿದ್ದಾರೆ. ಮಾರ್ಕ್ಸ್ ಪ್ರತಿಪಾದಿಸಿದ ವೈಜ್ಞಾನಿಕ ಸಮಾಜವಾದವು ಪ್ರಾಚೀನ ಗ್ರಾಮೀಣ ಜೀವನವನ್ನು ವೈಭವೀಕರಿಸುವ ಗಾಂಧಿ ಸಮಾಜವಾದ ಮತ್ತು ಅಧುನೀಕರಣದ ಮೃಗಮರೀಚಿಕೆಯನ್ನು ಹಿಂಬಾಲಿಸುವ ನೆಹರು ಸಮಾಜವಾದಕ್ಕಿಂತ ಮೂಲಭೂತವಾಗಿ ಎಷ್ಟು ಭಿನ್ನವಾಗಿದೆ ಎಂದು ಈ ಲೇಖನದಲ್ಲಿ ಸುಲಭವಾಗಿ ತಿಳಿಯಬಹುದು ಈಗ ಓದಿ –

ಸಮಾಜವಾದ– ಕಾರ್ಲ್ ಮಾರ್ಕ್ಸ್‌ರ ದೃಷ್ಟಿಯಲ್ಲಿ

ಸಮಕಾಲಿನ ಸಮಾಜದ ಆರ್ಥಿಕ ಅಭಿವೃದ್ಧಿಯ ನಿಯಮಗಳಿಂದಲೇ ಬಂಡವಾಳಶಾಹಿ ಸಮಾಜವು ಸಮಾಜವಾದಿ ಸಮಾಜವಾಗಿ ಮಾರ್ಪಡುವುದು ಅನಿವಾರ್ಯ ಎಂದು ಮಾರ್ಕ್ಸ್ ಸ್ಪಷ್ಟವಾಗಿ ಪ್ರತಿಪಾದಿಸುತ್ತಾರೆ. ಮಾರ್ಕ್ಸ್‌ರ ಮರಣದ ನಂತರ ಅರ್ಧ ಶತಮಾನದ ಅವಧಿಯಲ್ಲಿ ಸಾವಿರಾರು ವಿಧಗಳಲ್ಲಿ ಅತ್ಯಂತ ವೇಗದಿಂದ ವಿಸ್ತರಿಸುತ್ತಿರುವ ಕಾರ್ಮಿಕರ ಸಮಾಜೀಕರಣ ("Socialisation of labour"— ಗುಡಿ ಕೈಗಾರಿಕೆಗಳ ಬದಲು ಬೃಹತ್ ಕೈಗಾರಿಕೆಗಳಲ್ಲಿ ಭಾರೀ ಪ್ರಮಾಣದಲ್ಲಿ ಕಾರ್ಮಿಕರ ಜಮಾವಣೆ: ಅನು.), ಬೃಹತ್ ಪ್ರಮಾಣದ ಉತ್ಪಾದನೆಯ ಬೆಳವಣಿಗೆ, ಬಂಡವಾಳಗಾರರ ವಿವಿಧ ಒಕ್ಕೂಟಗಳು ಹಾಗೆಯೇ ಬೃಹದಾಕಾರವಾಗಿ ಹೆಚ್ಚುತ್ತಿರುವ ಹಣಕಾಸಿನ ಬಂಡವಾಳದ ವಿಸ್ತರಣೆ ಮತ್ತು ಪ್ರಭಾವ— ಇವೆಲ್ಲವುಗಳೂ ಅನಿವಾರ್ಯವಾಗಿ ಸಮಾಜವಾದದ ಆಗಮನಕ್ಕೆ ಪ್ರಮುಖ ಭೌತಿಕ ತಳಪಾಯಗಳಾಗುತ್ತವೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತರಬೇತಿಗೊಂಡ ಶ್ರಮಿಕವರ್ಗವೇ(proliteriat) ಸಾಮಾಜಿಕ ಪರಿವರ್ತನೆಯ ಪ್ರತ್ಯಕ್ಷ ನಿರ್ವಾಹಕವಾಗಿದೆ, ಭೌತಿಕ ಮತ್ತು ನೈತಿಕ ಪ್ರೇರಕ ಶಕ್ತಿಯಾಗಿದೆ.

ಬಂಡವಾಳಶಾಹಿಗಳ ವಿರುದ್ಧ ಶ್ರಮಿಕ ವರ್ಗದ ಹೋರಾಟವು ಹೆಚ್ಚಿನ ಅಂಶಃ ಶಕ್ತಿಯನ್ನು ಪಡೆದುಕೊಳ್ಳುತ್ತಾ ವಿವಿಧ ರೂಪಗಳಲ್ಲಿ ಪ್ರಕಟಗೊಂಡು, ಅನಿವಾರ್ಯವಾಗಿ ರಾಜಕೀಯ ಅಧಿಕಾರವನ್ನೇ ಗೆಲ್ಲುವ ನಿಟ್ಟಿನಲ್ಲಿ ಶ್ರಮಿಕ ವರ್ಗದ ಸರ್ವಾಧಿಕಾರ (the dictatorship of the proliteriat) ವನ್ನು ಸ್ಥಾಪಿಸಲು, ರಾಜಕೀಯ ಹೋರಾಟವಾಗಿ ಮಾರ್ಪಡುವುದು. ಉತ್ಪಾದನೆಯ ಸಮಾಜೀಕರಣ (socialisation of production) ದಿಂದಾ ಉತ್ಪಾದನೆಯ ಸಾಧನ ವಿಧಾನಗಳು ಶೋಷಕರ ಸ್ವಾಮ್ಯದಿಂದ ತಪ್ಪಿಸಲ್ಪಟ್ಟು ಸಮಾಜದ ಆಸ್ತಿಗಳಾಗದೇ ಉಳಿಯಲಾರವು. (expropriation ofthe expropriators: ಬಂಡವಾಳಶಾಹಿಗಳು ಈ ತನಕ ಉತ್ಪಾದನಾ ಸಾಧನ ವಿಧಾನಗಳ ಸ್ವಾಮ್ಯ ಹೊಂದಿದ್ದು ಶ್ರಮಿಕ ವರ್ಗ ಸೃಷ್ಟಿಸಿದ ಸಂಪತ್ತನ್ನು ಕಿತ್ತುಕೊಳ್ಳುತ್ತಿದ್ದರು ಈಗ ಶ್ರಮಿಕವರ್ಗವೇ ಅವರಿಂದ ಉತ್ಪಾದನಾ ಸಾಧನೆಗಳ ಸ್ವಾಮ್ಯವನ್ನು ಕಿತ್ತುಕೊಂಡು ಸಮಾಜದ ಆಸ್ತಿಗಳನ್ನಾಗಿ ಮಾಡಲಿದೆ. ಅನು.)

ಕಾರ್ಮಿಕರ ಉತ್ಪಾದನಾ ಶಕ್ತಿಯಲ್ಲಿ ಅಸಾಧಾರಣ ಹೆಚ್ಚಳ ಕಡಿಮೆ ಅವಧಿಯ ದುಡಿಮೆ, ಸಣ್ಣ ಪ್ರಮಾಣದ ಮತ್ತು ಪ್ರಾಚೀನ ಪದ್ಧತಿಯ ಅಸಂಘಟಿತ ಉತ್ಪಾದನೆಯ ಅವಶೇಷಗಳೆಲ್ಲವೂ ಅಳಿದು ಸುಧಾರಿತ ಮತ್ತು ಸಾಮುದಾಯಿಕ ಶ್ರಮ ಆಧಾರಿತ ಉತ್ಪಾದನೆ ಬೇರೂರುವುದು– ಇವು ಸಾಮಾಜಿಕ ಪರಿವರ್ತನೆಯ ನೇರ ಪರಿಣಾಮಗಳು.

ಬಂಡವಾಳ ಶಾಹಿ ಪದ್ಧತಿಯು ಕೃಷಿ ಮತ್ತು ಕೈಗಾರಿಕೆಗಳೊಳಗಿನ ಸಂಬಂಧಗಳನ್ನು ಶಾಶ್ವತವಾಗಿ ಕಡಿದೊಗೆಯುವುದು. ಆದರೆ ಅದೇ ಸಂದರ್ಭದಲ್ಲಿ ಅದರ ಅತ್ಯುನ್ನತ ಅಭಿವೃದ್ಧಿಯಿಂದಾಗಿ ಹೊಸ ಸಂಬಂಧಗಳ ಮೂಲಗಳೂ ಸಿದ್ಧಗೊಳ್ಳುತ್ತವೆ ಪ್ರಜ್ಞಾಪೂರ್ವಕವಾಗಿ ವಿಜ್ಞಾನದ ಬಳಕೆಯಿಂದಲೂ ಮತ್ತು ಸಾಮುದಾಯಿಕ ಶ್ರಮದ ಕೇಂದ್ರೀಕರಣದಿಂದಲೂ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಹೊಸ ಐಕ್ಯಮತ್ಯ ಉಂಟಾಗುವುದು ಮತ್ತು ಜನಸಂಖ್ಯೆಯ ಪುನರ್‌ವಿತರಣೆಯಾಗುವುದು ಹೀಗೆ (ಸಮಾಜವಾದಿ ಸಮಾಜದಲ್ಲಿ: ಅನು) ಕ್ರಮೇಣ ಗ್ರಾಮೀಣ ಹಿಂದುಳಿಕೆ, ಅನಾಗರೀಕತೆ ಮತ್ತು ಪ್ರತ್ಯೇಕತೆ ದೊಡ್ಡ ಪಟ್ಟಣಗಳಲ್ಲಿಯೇ ಜನರ ಅನೈಸರ್ಗಿಕ ಕೇಂದ್ರೀಕರಣ ಕೊನೆಗೊಳ್ಳುವುದು.

(ಮುಂದುವರಿಯುವುದು)

ಲಿಬ್ಯಾದ ವಿರುದ್ಧ ಶ್ರೀಮಾನ್ ರೇಗನ್‌ರ ಆರ್ಭಟ

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಶ್ರೀಮಾನ್ ರೇಗನ್‌ರವರು ಇತ್ತೀಚಿನ ದಿನಗಳಲ್ಲಿ ಬಹಳ ಕೂಗಾಡುತ್ತಿದ್ದಾರೆ. ಅವರ ಈ ಆರ್ಭಟಗಳ ಗುರಿ ಲಿಬ್ಯಾ ಹಾಗೂ ಅದರ ಅಧ್ಯಕ್ಷ ಕರ್ನಲ್ ಗದ್ಧಾಫಿ ಡಿಸಂಬರ್ 27 ರಂದು ರೋಮ್ ಹಾಗೂವಿಯನ್ನಾಗಳ ವಿಮಾನ ನಿಲ್ದಾಣಗಳಲ್ಲಿ 19ಮಾಯಕರ ಬಲಿತೆಗೆದುಕೊಂಡ ಆಕ್ರಮಣ ನಡೆಸಿದ್ದ ಭಯೋತ್ಪಾದಕರಿಗೆ ಲಿಬಿಯ ಪ್ರೋತ್ಸಾಹ ನೀಡುತ್ತಿದೆ ಎಂಬುದು ರೇಗನ್ ಆಪಾದನೆ. ಕರ್ನಲ್ ಗದ್ಧಾಫಿ ಈ ಭಯೋತ್ಪಾದಕ ಅಪರಾಧಗಳಿಗೆ ಹೊಣೆ ಎಂದು ರೇಗನ್ ಏಕಪಕ್ಷವಾಗಿ ನಿರ್ಧರಿಸಿಬಿಟ್ಟಿದ್ದಾರೆ. ಆದರೆ ಕರ್ನಲ್ ಗದ್ಧಾಫಿ ಮತ್ತು ಲಿಬ್ಯಾ ಸರಕಾರ ಈ ಅಪಾದನೆಯನ್ನು ನೇರವಾಗಿ ತಳ್ಳಿಹಾಕಿದ್ದಾರೆ. ಮತ್ತು ಅಸಂಸ್ಥಾ ಸಾಮ್ರಾಜ್ಯಶಾಹಿಗಳು ಅರಬ್ ಪ್ರಭುತ್ವಗಳನ್ನು ಒಂದೊಂದಾಗಿ ಮತ್ತೆ ಆಕ್ರಮಿಸಿಕೊಳ್ಳುವ ತಮ್ಮ ವಿಶ್ವವ್ಯಾಪೀ ಕಾರ್ಯಯೋಜನೆಯ ಅಂಗವಾಗಿ ಲಿಬ್ಯಾವನ್ನು ಅತಿಕ್ರಮಿಸಲು ತಂತ್ರ ಹೂಡುತ್ತಿದ್ದಾರೆ ಎಂದು ಪ್ರತಿಯಾಗಿ ಅಪಾದಿಸಿದ್ದಾರೆ.

ರೇಗನ್ ಮೊದಲು ಲಿಬ್ಯಾದ ಮೇಲೆ ನಾವಿಕ ಪಡೆಯನ್ನು ಕಳಿಸುವ ಬೆದರಿಕೆ ಹಾಕಿದ್ದರು ಅಸಂಸ್ಥಾದ ಸಾಮಂತರಂತೆ ವರ್ತಿಸುವ ಪ್ರಭುತ್ವಗಳೂ ಸೇರಿದಂತೆ ಎಲ್ಲಾ ಅರಬ್ಬರು ಇದನ್ನು ಜಂಟಿಯಾಗಿ ವಿರೋಧಿಸಿದುದರಿಂದ ಈ ಅಪಾಯಕಾರಿ ದುಸ್ಸಾಹಸವನ್ನು ಅತ ಕೈಬಿಡಬೇಕಾಯಿತು. ಅವರ ಪಾಶ್ಚಿಮಾತ್ಯ ಮಿತ್ರರು ಕೂಡಾ ಲಿಬ್ಯಾದ ಅತಿಕ್ರಮದ ಬಗ್ಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು. ಸೋವಿಯತ್ ಒಕ್ಕೂಟ ಅಸಂಸ್ಥಾದ ಬೆದರಿಕೆಯ ಮೂಲಕ "ನವಜಾಗತಿಕಶಾಹಿ" (ಇಡೀ ವಿಶ್ವವೇ ತನ್ನದಾಗಿಸಿಕೊಳ್ಳುವ ವಾದ) ಮೆರೆಸುವುದರ ವಿರುದ್ಧ ದೇಶಗಳ ಸ್ವಾಧೀನತೆಯ ನಗ್ನ ಉಲ್ಲಂಘನೆಯ ಬಗ್ಗೆ ತೀವ್ರ ಹೆಚ್ಚರಿಕೆ ನೀಡಿದೆ. ಇಸ್ಲಾಮಿಕ್ ಕಾನ್ಫರೆನ್ಸ್ ಸಂಘಟನೆಯ ವಿದೇಶಾಂಗ ಮಂತ್ರಿಗಳ ಸಭೆ ಅಸಂಸ್ಥಾ ಬೆದರಿಕೆಯ ಬಗ್ಗೆ ಬಲವಾದ ವಿರೋಧ ವ್ಯಕ್ತಪಡಿಸಿ ಇಂತಹ ಯಾವುದೇ ಆಕ್ರಮಣ ಗಂಡಾಂತರಕಾರಿಯಾಗಬಹುದೆಂದು ಎಚ್ಚರಿಸಿದೆ.

ಈ ರೀತಿ ಅಸಂಸ್ಥಾ ಸಾಮ್ರಾಜ್ಯಶಾಹಿ ಹಾಗೂ ಅದರ ದಳವಾಯಿರೇಗನ್ ತನ್ನ ನ್ಯಾಟೋಮಿತ್ರರೂ ಸೇರಿದಂತೆ ಜಾಗತಿಕ ಸಾರ್ವಜನಿಕಾಭಿಪ್ರಾಯವನ್ನೂ ಎದುರು ಹಾಕಿಕೊಳ್ಳಲಾಗದೆ ಆಕ್ರಮಣದ ಜೂಜಾಟದಿಂದ ಹಿಂದೆ ಸರಿಯಲೇ ಬೇಕಾಯಿತು.

ಏಕೀ ಆರ್ಭಟ

ಲಿಬ್ಯಾದ ವಿರುದ್ಧ ಇಷ್ಟೊಂದು ರೇಗನ್ ಕೂಗಾಟವೇಕೆ ? ರೇಗನ್ ಲಿಬ್ಯಾ ಹಾಗೂ ಅದರ ಮುಖಂಡ ಗದ್ಧಾಫಿಯವರನ್ನು ಅಂತರಾಷ್ಟ್ರೀಯ ವಾದದ ಮೂಲಸ್ರೋತ್ರವಾಗಿ, ಪಿ.ಎಲ್.ಒ. ಹಾಗೂ ಲೆಬನಾನ್ ಹಾಗೂ ಇತರ ಅರಬ್ ದೇಶಗಳ ವಿರುದ್ಧ ಇಸ್ರೇಲಿನ ಭಯೋತ್ಪಾದಕ ಮತ್ತು ಮಿಲಿಟರಿ ಆಕ್ರಮಣ ಚಟುವಟಿಕೆಗಳ ವಿರುದ್ಧ ಎಡೆ ಬಿಡದ ಹೋರಾಟಗಾರನಾಗಿ ಕಾಣುತ್ತಾರೆ ಲಿಬ್ಯಾ ತನ್ನನ್ನು ಲೆಕ್ಕಿಸದಿದ್ದುದರಿಂದ ಸಿಟ್ಟಿಗೆದ್ದ ಅತ ಲಿಬ್ಯಾದ ವಿರುದ್ಧ ವಾಣಿಜ್ಯ ಪ್ರತಿಬಂಧ, ಅಸಂಸ್ಥಾದಲ್ಲಿ ಲಿಬ್ಯಾದ ಆಸ್ತಿಗಳ ಮುಟ್ಟುಗೋಲು, ಲಿಬ್ಯಾ ನಾಗರಿಕರನ್ನು ಅಸಂಸ್ಥಾದಿಂದ ವಾಪಾಸು ಕಳಿಸಿ, ಅಸಂಸ್ಥಾದ ನಾಗರಿಕರನ್ನು ವಾಪಾಸು ಕರೆಸಿಕೊಳ್ಳುವ ಇಲ್ಲವಾದರೆ ಶಿಕ್ಷೆ ನೀಡುವ ಕ್ರಮ ಕೈಗೊಂಡು ಈಗ ಸೈನಿಕ ಕಾರ್ಯಾಚರಣೆಯ ಬೆದರಿಕೆ ಹಾಕುತ್ತಿದ್ದಾರೆ. ಹೆಚ್ಚುತ್ತಿರುವ ಅಂತರ ರಾಷ್ಟ್ರೀಯ ಭಯೋತ್ಪಾದಕತೆಯ ವಿರುದ್ಧ ಹೋರಾಟ ಇದೆಂದು ಅವರ ಹೇಳಿಕೆ. ಯಾಕೆಂದರೆ ಈ ಪಿಡುಗು ಲಿಬ್ಯಾದ ಸಹಾನುಭೂತಿ, ಬೆಂಬಲ ಹಾಗೂ ಶಾಮೀಲಿನಿಂದ ಆಗುತ್ತಿದೆಯಂತೆ.

ಯಾವುದೇ ಪ್ರಭುತ್ವ ಅಥವಾ ವ್ಯಕ್ತಿ ಭಯೋತ್ಪಾದಕತೆಯನ್ನು ಉಪದೇಶಿಸುವುದು, ಆಚರಿಸುವುದು ವರ್ಜ್ಯ. ಆದರೆ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಯಾರು ಭಯೋತ್ಪಾದಕತೆ ನಡೆಸುತ್ತಿದ್ದಾರೆ ಎಂಬ ಏಕಪಕ್ಷೀಯವಾಗಿ ತೀರ್ಪು ಕೊಡುವ ಹಕ್ಕನ್ನು ರೇಗನ್‌ರವರಿಗೆ ಯಾರು ಕೊಟ್ಟಿದ್ದಾರೆ ? ರೋಮ್ ಹಾಗೂ ವಿಯೆನ್ನಾ ವಿಮಾನ ನಿಲ್ದಾಣಗಳ ಭೀಕರ ಘಟನೆಗಳನ್ನು ನಾವು ಖಂಡಿಸುತ್ತೇವೆ. ಅದೇ ಹೊತ್ತಿಗೆ ಇಂತಹ ಭಯೋತ್ಪಾದಕ ಪಡೆಗಳಿಗೆ ವಿಭಿನ್ನ ಕ್ಯಾಂಪುಗಳಲ್ಲಿ, ಪ್ರದೇಶಗಳಲ್ಲಿ ವ್ಯವಸ್ಥಿತ ತರಭೇತಿ ನೀಡುತ್ತಿರುವ ದೇಶವೆಂದರೆ ಅದು ಅಸಂಸ್ಥಾವೇ ಎಂದು ಅಸಂಸ್ಥಾ ಸರಕಾರಕ್ಕೆ ಹಾಗೂ ಅದರ ಮುಖ್ಯಸ್ಥ ರೇಗನ್‌ರಿಗೆ ನಾವು ಮತ್ತೊಮ್ಮೆ ಹೇಳಬಯಸುತ್ತೇವೆ ಕುಪ್ರಸಿದ್ಧ ಸಿ.ಐ.ಎ ಜಗತ್ತಿನ ಅತ್ಯಂತ ದೊಡ್ಡ ಭಯೋತ್ಪಾದಕ ವಿಭಾಗವನ್ನು ಹೊಂದಿದೆ ಎಂಬುದು ಒಂದು ಸತ್ಯ ಸಂಗತಿ ಅದರ ಮೂಲಕ ಸಿ ಐ ಎ ಬೇರೆ ಬೇರೆ ದೇಶಗಳ ವಿರುದ್ಧ ಅವುಗಳ ಮುಖ್ಯಸ್ಥರ ವಿರುದ್ಧ ಹಲವಾರು ಕೊಲೆಗಡುಕ ಚಟುವಟಿಕೆ ನಡೆಸಿಕೊಂಡು ಬರುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಕೊಲೆಗೈದ ಭಯೋತ್ಪಾದಕರು ಸಿ ಐ ಎ. ಸಂಘಟನೆಯಿಂದ ಹಾಗೂ ವಿವಿಧ ದೇಶಗಳಲ್ಲಿರುವ ಅದರ ಏಜೆಂಟರಿಂದ ಪ್ರೇರಣೆ ಪಡೆದಿರಲಿಲ್ಲವೇ ?

ಲಿಬ್ಯಾವನ್ನು ಅಂತರ್ರಾಷ್ಟ್ರೀಯ ಭಯೋತ್ಪಾದಕತೆಯ ಕೇಂದ್ರವೆಂದು ಅಸಂಸ್ಥಾ ಅಧ್ಯಕ್ಷ ರೇಗನ್ ಅಪಾದಿಸುತ್ತಿರುವುದು ಸೈತಾನ ಧರ್ಮಗ್ರಂಥವನ್ನು ಪಠಿಸಿದಂತೆ ಅತ್ಯಂತ ಅಪಹಾಸ್ಯದ ವಿಷಯ ಅಸಂಸ್ಥಾ ಕೈಗೊಂಬೆ ಇಸ್ರೇಲ್ ದಶಕಗಳಿಂದ ಮಾಡುತ್ತಿರುವುದೇನು ? ಪಿ ಎಲ್.ಒ. ಮತ್ತು ಅದಕ್ಕೆ ಸಹಾನುಭೂತಿ ತೋರುವ ದೇಶಗಳ ವಿರುದ್ಧ ಭಯೋತ್ಪಾದಕತೆಯನ್ನಲ್ಲವೇ ಅದು ನಡೆಸುತ್ತಿರುವುದು ? ಲೆಬನಾನ್‌ನ್ನು ಅದು ನಡೆಸುತ್ತಿರುವುದು ನಗ್ನ ದರೋಡೆಯಲ್ಲವೇ ? ಅಸಂಸ್ಥಾದ ಪೂರ್ಣ ಬೆಂಬಲ ಪಡೆದ ದಕ್ಷಿಣ ಆಫ್ರಿಕಾ ಸರಕಾರ ಏನು ಮಾಡುತ್ತಿದೆ? ಜನತೆಯ ಮೇಲೆ, ತನ್ನ ಸುತ್ತಲಿನ ರಾಷ್ಟ್ರಗಳ ಮೇಲೆ ಭಯೋತ್ಪಾದಕತೆಯನ್ನಲ್ಲದೆ ಮತ್ತೇನು ಮಾಡುತ್ತಿದೆ. ಅಂತರ್ರಾಷ್ಟ್ರೀಯ ಭಯೋತ್ಪಾದಕತೆಯ ಮೇಲೆ ಏಕಪಕ್ಷೀಯವಾಗಿ ತೀರ್ಪು ನೀಡುವ ರೇಗನ್ ಒಂದೆಡೆ ಇಸ್ರೇಲ್ ಹಾಗೂ ದಕ್ಷಿಣ ಆಫ್ರಿಕಾದಂತಹ ನಗ್ನ ಭಯೋತ್ಪಾದಕ ಆಡಳಿತಗಳಿಗೆ ನೆರವು ನೀಡುತ್ತಾರೆ, ಇನ್ನೊಂದೆಡೆ ಲಿಬ್ಯಾದ ಮೇಲೆ ಆರ್ಥಿಕ ದಿಗ್ಬಂಧನ, ವ್ಯಾಪಾರ ಪ್ರತಿಬಂಧ ಹೇರುತ್ತಾರೆ! ಅಸಂಸ್ಥಾ ಆಡಳಿತ ಜಗತ್ತಿನಲ್ಲಿ ವ್ಯಾಪಕವಾಗಿ ಕಂಡು ಬಂದ, ವಿಶೇಷವಾಗಿ ಅರಬ್ಬರ ಕ್ರೋಧತಪ್ತ ಪ್ರತಿಕ್ರಿಯೆಗಳಿಂದ ಪಾಠ ಕಲಿತಂತೆ ಕಾಣುತ್ತಿಲ್ಲ ಬದಲಿಗೆ ರೇಗನ್ ಕೂಗಾಟ ಈಗ ಹೆಚ್ಚುತ್ತಿರುವಂತೆ ಕಾಣುತ್ತದೆ. ಆದರೂ ಅಲಿಪ್ತ ದೇಶಗಳ ಸಮುದಾಯದ ಕಚೇರಿಯಿಂದ ಇನ್ನೂ ಅಸಂಸ್ಥಾದ ಯುದ್ಧ ಪಿಪಾಸುತನದ ತೀವ್ರ ಖಂಡನೆ ಯಾಕೆ ಹೊರ ಬಿದ್ದಿಲ್ಲವೋ ಅರ್ಥವಾಗುತ್ತಿಲ್ಲ ಅಸಂಸ್ಥಾದಿಂದಲಿಬ್ಯಾ ಅತಿಕ್ರಮಣ ಹಾಗೂ ಆರ್ಥಿಕ ದಿಗ್ಬಂಧನದ ಬೆದರಿಕೆಯನ್ನು ಭಾರತ ಸರ್ಕಾರ ತೀವ್ರವಾಗಿ, ಖಂಡಿಸಬೇಕೆಂದು ನಾವು ಕರೆ ನೀಡುತ್ತೇವೆ. ಲಿಬ್ಯಾ ತನ್ನ ರಾಷ್ಟ್ರೀಯ ಸ್ವಾಧೀನತೆ ಹಾಗೂ ಸಾರ್ವಭೌಮತೆಗೆ ಅಸಂಸ್ಥಾ ಒಡ್ಡಿರುವ ಬೆದರಿಕೆಯನ್ನು ಎದುರಿಸಿ ದೃಢವಾಗಿ ನಿಲ್ಲುತ್ತದೆಯೆಂದು ನಮಗೆ ಖಾತರಿಯಿದೆ.

ಈ ಬೆಲೆ ಏರಿಕೆ ಏಕೆ ?

ಇದೊಂದು ಯಕ್ಷ ಪ್ರಶ್ನೆ. ವಿಶ್ವಾದ್ಯಂತ ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಹೆಚ್ಚಿ, ಬೆಲೆ ಕೇವಲ ಹಿಂದಿನ 15 ದಿನಗಳಲ್ಲಿಯೇ ಒಂದು ಬ್ಯಾರೆಲಿಗೆ ಹತ್ತು ಡಾಲರಿನಷ್ಟು (ಸುಮಾರು ನೂರು ರೂ.ಗಳಿಗಿಂತಲೂ ಹೆಚ್ಚು) ಕುಸಿದಿರುವಾಗ ನಮ್ಮ ದೇಶದಲ್ಲಿ ಪೆಟ್ರೋಲಿಯಂ ಬೆಲೆಯನ್ನು ಏರಿಸಿದ್ದು ಏಕೆ ? ಇದೇ ಆ ಯಕ್ಷ ಪ್ರಶ್ನೆ. ಇದಕ್ಕೆ ಆಳುವ ವರ್ಗಗಳು ನೀಡುತ್ತಿರುವ ಸಬೂಬು ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ವಿಪರೀತವಾಗಿ ಏರಿದೆ (ಶೇ 5.8 ರಷ್ಟು), ಈ ಏರಿಕೆಯಿಂದ ದೇಶದ ಆಮದು ವಸ್ತುಗಳ ಮೌಲ್ಯ ವಿಪರೀತವಾಗಿ ಏರಿ ದೇಶದ ಮೇಲೆ ದೊಡ್ಡ ಹೊರೆಯನ್ನು ಹಾಕುತ್ತಿದೆ. ಆದುದರಿಂದ ಈ ಆಮದನ್ನು ಕಡಿಮೆಗೊಳಿಸುವ ಸಲುವಾಗಿ ಪೆಟ್ರೋಲಿಯಂ ಉತ್ಪನ್ನಗಳ ಬಳಕೆಯನ್ನು ಕಡಿಮೆಗೊಳಿಸಬೇಕಾಗಿದೆ. ಬೆಲೆ ಏರಿಸಿದರೆ ಪೆಟ್ರೋಲ್, ಸೀಮೆಎಣ್ಣೆ, ಇತ್ಯಾದಿಗಳ ಬಳಕೆ ಕಡಿಮೆಯಾಗಿ ದೇಶದ ಆಮದಿನಲ್ಲಿ ಉಳಿತಾಯವಾಗುತ್ತದೆ. ಸರ್ಕಾರವೇ ಒಪ್ಪಿಕೊಂಡ ಹಾಗೆ ವಿಶ್ವದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಇಳಿತದಿಂದ ಕೇಂದ್ರ ಸರಕಾರಕ್ಕೆ ದೊಡ್ಡ ಉಳಿತಾಯವಾಗಿದೆ. ಜೊತೆಗೆ ಇತ್ತೀಚಿಗೆ ಕಲ್ಲಿದ್ದಲ ಬೆಲೆ, ಆಹಾರ ಧಾನ್ಯಗಳಾದ ಗೋಧಿ, ಅಕ್ಕಿಗಳ ಬೆಲೆ, ರಸಗೊಬ್ಬರಗಳ ಬೆಲೆಯನ್ನು ಏರಿಸಿದ್ದು ಏಕೆ ? ಅದಕ್ಕೆ ನೀಡುವ ಕಾರಣಗಳೇನು ? ಪ್ರತಿಯೊಂದಕ್ಕೂ ಬೇರೆ ಬೇರೆ ಕಾರಣಗಳನ್ನು ನೀಡಲಾಗಿದೆ. ಆದರೆ ಇವೆಲ್ಲಾದರ ಹಿಂದಿನ ಹೂರಣವೂ ಒಂದೇ. ಎಲ್ಲಕ್ಕೂ ಒಂದೇ ಕಾರಣ.

ಬಜೆಟ್‌ನಲ್ಲಿ ಕೊರತೆ, ವಿದೇಶಿ ವಾಣಿಜ್ಯದಲ್ಲಿ ಕಂದರ

85-86 ರ ಬಜೆಟ್‌ನ್ನು ಹಿಂದಿನ ವರ್ಷ ಮಾರ್ಚಿನಲ್ಲಿಯೇ ರಾಜೀವ ಗಾಂಧಿಯವರು ಮಂಡಿಸಿದಾಗಲೇ 1300 ಕೋಟಿ ರೂಗಳ ಕೊರತೆ ಬಜೆಟ್ ಅನ್ನು ಸೂಚಿಸಿತ್ತು. ಆಗಲೇ ಸಿ ಪಿ ಐ. (ಎಂ) ಪಕ್ಷ ಇದು 5-6 ಸಾವಿರ ಕೋಟಿ ರೂಗಳವರೆಗೂ ಮುಟ್ಟುತ್ತದೆ 1300 ಕೋಟಿ ರೂ. ಕೊರತೆಯೆಂಬುದು ಕೇವಲ ಕಣ್ಣು ಮುಚ್ಚಾಲೆ ಎಂದು ತಿಳಿಸಿತ್ತು. ಇತ್ತೀಚಿಗೆ ಕಲ್ಕತ್ತಾ ಅಧಿವೇಶನದಲ್ಲಿ ವಾಣಿಜ್ಯದ ಕೊರತೆಯೇ 9000 ಕೋಟಿ ರೂ ಮುಟ್ಟ ಬಹುದೆಂದು ತಿಳಿಸಿದ್ದರು. ಅದು ಈಗ ನಿಜವಾಗಿ ಬಕಾಸುರನಂತೆ ಬಾಯ್ದೆರೆದು ನಿಂತಿದೆ.

ಈ ಆದಾಯ ಹಾಗೂ ವೆಚ್ಚದ ನಡುವಣ ಅಗಾಧ ಕಂದರವನ್ನು ಮುಚ್ಚುವುದು ಹೇಗೆ ? ವಿಶ್ವಾದ್ಯಂತ ಆರ್ಥಿಕ ಬಿಕ್ಕಟ್ಟಿನ ನಡುವೆ ಬಂಡವಾಳ ಶಾಹಿ ಪಥದಲ್ಲಿ, ಕಣ್ಣು ಮುಚ್ಚಿ ಸಾಗುತ್ತಿರುವ, ತಮ್ಮ ಲಾಭವೊಂದೇ ಗುರಿಯಾಗಿರುವ ಆಳುವ ವರ್ಗಗಳಿಗೆ ಕಾಣುವುದೇ ಮೂರು ದಾರಿಗಳು.

ಒಂದನೆಯದಾಗಿ : ಕಡಿವಾಣವಿಲ್ಲದೆ, ಆಧಾರವಿಲ್ಲದೆ ಹಣವನ್ನು, ರೂಪಾಯಿ ನೋಟುಗಳನ್ನು ಮುದ್ರಿಸಲು ರಿಸರ್ವ್‌ಬ್ಯಾಂಕ್‌ಗೆ ನಿರ್ದೇಶನ ನೀಡುವುದು. ಇದರಿಂದ ಹಣದ ನಿಜ ಬೆಲೆಯನ್ನು (ಕೆಳಗಿನ ಪಟ್ಟಿ ನೋಡಿ) ಕೇವ 15-16 ಪೈಸೆಗೆ ಇಳಿಸುವುದು

ರೂಪಾಯಿಯ ನಿಜ ಬೆಲೆ

1960 :	100 ಪೈಸೆ
1965 :	72.99 ಪೈಸೆ
1970 :	54.35 ಪೈಸೆ
1975 :	31.15 ಪೈಸೆ
1980 :	25.64 ಪೈಸೆ
1981 :	22.68 ಪೈಸೆ
1982 :	21.05 ಪೈಸೆ
1983 :	18.80 ಪೈಸೆ
1984 :	17.36 ಪೈಸೆ
1985 :	16.64 ಪೈಸೆ

ಎರಡನೆಯದಾಗಿ : ಅಷ್ಟೂ ಹಣವನ್ನು ತೆರಿಗೆ ಏರಿಸಿ, ಕೇಂದ್ರದ ನಿಯಂತ್ರಣದಲ್ಲಿರುವ ವಸ್ತು ಹಾಗೂ ಸೇವೆಗಳ ಬೆಲೆ ಏರಿಸಿ ಬಡವರ ಹೊಟ್ಟೆಯ ಮೇಲೆ ಹೊಡೆದು ಅವರ ವೇತನವನ್ನು ಸ್ತಂಭನಗೊಳಿಸಿ ತುಂಬಿಸಿಕೊಳ್ಳುವುದು

ಮೂರನೆಯದಾಗಿ: ವಿಶ್ವಬ್ಯಾಂಕ್ ಐ ಎಂ ಎಫ್‌ಗಳ ಬಳಿಗೆ ಓಡುವುದು. ಅವರು ಹಾಕುವ ಷರತ್ತುಗಳಿಗೆ ತಲೆಬಾಗಿ, ಅವರು ನೀಡಿದಷ್ಟು ಸಾಲವನ್ನು ತರುವುದು. ಅವರಿಗೆ ನಮ್ಮ ಸ್ವಾತಂತ್ರ್ಯವನ್ನು, ಸ್ವಾಯತ್ತತೆಯನ್ನು ಒತ್ತೆಯಿಟ್ಟು ಈಗಾಗಲೇ ಮೂರನೇ ವಿಶ್ವದ ಅನೇಕ ರಾಷ್ಟ್ರಗಳು ನರಳುತ್ತಿರುವಂತೆ ಸಾಲದ ಬಲೆಗೆ ಇಡಿ ಜನತೆಯನ್ನು ಸಿಕ್ಕಿಸಿ ನರಳಿಸುವುದು.

ರಾಜೀವ ಗಾಂಧಿಯವರು ಈಗ ಇದರಲ್ಲಿ ಮೊದಲೆರಡನ್ನು ಮುಗಿಸಿದ್ದಾರೆ. ಆ ಕಾರಣಕ್ಕಾಗಿಯೇ ಈಗ ಬೆಲೆ ಏರಿಸಿರುವುದು. ಮತ್ತೆ ಮುಂದಕ್ಕೆ ಈಗಾಗಲೇ ತೆಗೆದುಕೊಂಡಿರುವ ಸಾಲ ಸಾಲದೆ ವಿಶ್ವಬ್ಯಾಂಕ್‌ಗೆ ಕೈಯೊಡ್ಡಲು ತಯಾರಾಗಿರುವುದು.

ಈ ಬಜೆಟ್ ಕೊರತೆ ಏಕೆ ? ಆದಾಯಕ್ಕಿಂತ ಮಿಗಿಲಾದ ವೆಚ್ಚ ಯಾತಕ್ಕಾಗಿ? ದೇಶದಲ್ಲಿ ಅನೇಕ ರಾಜ್ಯಗಳು ಎದುರಿಸುತ್ತಿರುವ ಬರಗಾಲವನ್ನು ಪರಿಹರಿಸುವ ಕಾಮಗಾರಿಗಳಿಗಾಗಿಯೇ ? ಅಥವಾ ಜನಗಳಿಗೆ ಸೌಕರ್ಯ ನೀಡುವ ಯೋಜನೆಗಳಿಗಾಗಿಯೆ? ಅಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗಯೋಜನೆಯಲ್ಲಿ, ಕುಡಿಯುವ ನೀರಿನ ಯೋಜನೆಗಳಲ್ಲಿ, ಟ್ರೈಸಂನಲ್ಲಿ ನೂರಾರು ಕೋಟಿ ರೂ. ಕಡಿತ ಮಾಡಿದ ರಾಜೀವ ಗಾಂಧಿಯವರ ಬಜೆಟ್ ಬಡಜನರ ಬಗ್ಗೆ ಯೋಚಿಸುತ್ತದೆಯೇ ?

ಈ ಎಲ್ಲ ಕೊರತೆ ಕಂಪ್ಯೂಟರ್ ಪ್ರಿಯ ರಾಜೀವಗಾಂಧಿಯವರು, ನಮ್ಮ ದೇಶವನ್ನು 21ನೆಯ ಶತಮಾನಕ್ಕೆ ಒಮ್ಮೆಲೆ ಹಾರಿಸಬೇಕೆಂದಿರು ವರಾಜೀವ ಗಾಂಧಿಯವರು, ತಮ್ಮ ಹಾಗೂ ತಮ್ಮ ಜೊತೆಯಲ್ಲಿ ಹಾರಲು ಪ್ರಯತ್ನ ಮಾಡುತ್ತಿರುವ ಆಳುವ ವರ್ಗದ ಬಂಡವಾಳ ಶಾಹಿಗಳನ್ನು ಅದರಲ್ಲಿಯೂ ಬಿರ್ಲಾ, ಟಾಟಾ ಗಳಂತಹ ಏಕಸಾಮ್ಯ ಬಂಡವಾಳ ಶಾಹಿಗಳನ್ನು 21ನೇ ಶತಮಾನಕ್ಕೆ ಹಾರಿಸಲು ಬೇಕಾದ ವೆಚ್ಚ- ಅಮೇರಿಕದಿಂದ, ಯೂರೋಪಿನ ಬಂಡವಾಳಶಾಹಿ ದೇಶಗಳಿಂದ ಏಷಿಯದ್ದೇ ಆದ ಜಪಾನಿನಿಂದ ಕಂಪ್ಯೂಟರ್‌ಗಳನ್ನು ಆಟೋಮ್ಯಾಟಿಕ್ ಯಂತ್ರಗಳನ್ನು ಮಾರುತಿ ಹೆಸರಿನ ಸಜ್ಜುಕಿ ಕಾರಿನ ತಂತ್ರಜ್ಞಾನವನ್ನು ಕೊಳ್ಳಲು ಬೇಕಾದ ವೆಚ್ಚವನ್ನು ಪೂರೈಸಲು ಉದ್ಭವವಾದ ಹಣದ ಕೊರತೆ ಇದು.

ಒಟ್ಟಿನಲ್ಲಿ ರಾಜೀವಗಾಂಧಿಯವರು 21ನೇ ಶತಮಾನಕ್ಕೆ ಹಾರಲು ಬೇಕಾದ ಹಣವನ್ನು, ಬಂಡವಾಳಶಾಹಿಗಳಿಗೆ ಕಂಪ್ಯೂಟರ್ ಕೊಳ್ಳಲು ಬೇಕಾದ ಹಣವನ್ನು, ತಮ್ಮ ಪಿಮ್ಮಂತಹ ಬಡಜನರ ತಲೆಯ ಮೇಲೆ ಕೈಯಿಟ್ಟು, ತಿಸೆ ತಕ್ತರಿಸಿ ದೋಚುವ ರೀತಿ ಇದು- ಪೆಟ್ರೋಲ್, ಡೀಸಲ್, ಸೀಮೆಣ್ಣೆ, ಅಡಿಗೆ ಅನಿಲ, ಅಕ್ಕಿ, ಗೋಧಿ, ಕಲ್ಲಿದ್ದಲು, ರಸಗೊಬ್ಬರಗಳ ಬೆಲೆಯನ್ನು ಏರಿಸಿರುವುದು.

ಇನ್ನೂ ಮುಂದೆ ಬಜೆಟ್ ಬರಲಿದೆ, ಮತ್ತಷ್ಟು ಹೊರೆಯನ್ನು ಹೊರಿಸಲಿದೆ.

ರಾಜೀವಗಾಂಧಿಯವರ ಬಜೆಟ್ ನಂತರ ಬೆಲೆ ಸೂಚ್ಯಾಂಕ

ಮಾರ್ಚ್	586
ಏಪ್ರಿಲ್	594
ಮೇ	600
ಜೂನ್	606
ಜುಲೈ	615
ಆಗಸ್ಟ್	618
ಸೆಪ್ಟಂಬರ್	619
ಅಕ್ಟೋಬರ್	625
ನವಂಬರ್	630
ಡಿಸೆಂಬರ್	630

ಭಾರತದ ನಗರಗಳಲ್ಲಿ ಬೆಂಗಳೂರು ಅತಿ ದುಬಾರಿ, ಕಲ್ಕತ್ತಾ ಅತಿ ಅಗ್ಗದ ಬೆಲೆಗಳ ನಗರ.

	ಬೆಂಗಳೂರು	ಕಲ್ಕತ್ತಾ	ಮುಂಬೈ	ದಿಲ್ಲಿ
ಮಾರ್ಚ್	648	569	626	606
ಏಪ್ರಿಲ್	656	579	638	616
ಮೇ	667	588	645	618
ಜೂನ್	668	595	650	631
ಜುಲೈ	672	605	651	640
ಆಗಸ್ಟ್	677	606	650	654
ಸೆಪ್ಟಂಬರ್	669	617	639	649

ಫೆ. 20 : 'ಅಖಿಲ ಭಾರತ ಪ್ರತಿಭಟನಾ ದಿನ' ಆಚರಿಸಲು ಎನ್. ಸಿ. ಸಿ. ಕರೆ

[ಕಾಂ. ಎಂ.ಕೆ. ಪಂಧೆಯವರು ನೀಡಿದ ಪತ್ರಿಕಾ ಹೇಳಿಕೆ]

6.2.86 ರಂದು ಸೇರಿದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳುವಳಿ ಸಮಿತಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಣೆ ಮಾಡಲಾಗುತ್ತಿರುವ ಸಕ್ಕರೆ, ಕಲ್ಲಿದ್ದಲು, ಎಣ್ಣೆ, ಅಕ್ಕಿ, ಗೋಧಿಗಳ ಬೆಲೆ ಏರಿಕೆಯನ್ನೂ ಹಾಗೇಯೇ ಪೆಟ್ರೋಲ್, ಡಿಸೆಲ್, ಸೀಮೆಎಣ್ಣೆ ಹಾಗೂ ಅಡಿಗೆ ಅನಿಲದ ಬೆಲೆಯಲ್ಲಿ ತೀವ್ರ ಏರಿಕೆ ಭಾರತದ ಕಾರ್ಮಿಕ ವರ್ಗದ ಮೇಲೆ, ಸಾಮಾನ್ಯ ಜನತೆಯ ಮೇಲೆ ಭಾರವಾದ ಹೊರೆಯನ್ನು ಹೇರುತ್ತದೆಂದು ಬಲವಾಗಿ ಖಂಡಿಸಿತು. ತೋರಿಕೆಯ ಬೆಲೆ ಇಳಿಕೆ ಜನರ ಕಣ್ಣಿಗೆ ಮಣ್ಣೆರಚುವಂತಹದಷ್ಟೇ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ

ಈ ಬೆಲೆ ಏರಿಕೆ ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಕೇಂದ್ರ ಸರಕಾರ ಮಣಿದಿರುವುದರ ನೇರಫಲ. ಈ ತಿಂಗಳಕೊನೆಯಲ್ಲಿ ಲೋಕಸಭೆಯ ಮುಂದೆ ಬರಲಿರುವ ಬಜೆಟ್‌ನಲ್ಲಿ ಬರಲಿರುವ ತೆರಿಗೆಯ ಹೊರೆಗೆ ಮುನ್ನುಡಿ ಅಷ್ಟೇ.

ದೇಶಾದ್ಯಾಂತ ಕಾರ್ಮಿಕ ಸಂಘಗಳು ಇತರ ಸಾಮೂಹಿಕ ಸಂಘಟನೆಗಳು ಬೆಲೆ ಏರಿಕೆ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಗಳನ್ನು ಹಾಗೂ ಬಂದ್‌ಗಳನ್ನು ಎನ್.ಸಿ.ಸಿ. ಸ್ವಾಗತಿಸುತ್ತದೆ. ಈ ಚಳುವಳಿಯನ್ನು ಮುಂದೊಯ್ಯಬೇಕೆಂದು ಕರೆ ನೀಡುತ್ತದೆ.

ಕಾರ್ಮಿಕ ವರ್ಗದ ಶಕ್ತಿಪೂರ್ಣ ಧ್ವನಿ

ಫೆಬ್ರವರಿ 20 ರಂದು, ಲೋಕಸಭೆಯ ಬಜೆಟ್ ಅಧಿವೇಶನದ ಆರಂಭ ದಿನದಂದು, ಎಲ್ಲಾ ಕಾರ್ಮಿಕ ಸಂಘಗಳೂ, ಕಾರ್ಮಿಕ ವರ್ಗವೂ ಆಡಳಿತಾತ್ಮಕ ಬೆಲೆ ಏರಿಕೆ ವಿರುದ್ಧ ಮೆರವಣಿಗೆ, ಪ್ರತಿಭಟನೆ, ಕೈಗಾರಿಕಾ ಮುಷ್ಕರ ಮಾಡಿ ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಬೇಕೆಂದು, ಕಾರ್ಮಿಕ ವರ್ಗದ ಶಕ್ತಿಶಾಲಿ ಧ್ವನಿಯನ್ನು ಎತ್ತಬೇಕೆಂದು ಕರೆನೀಡುತ್ತದೆ.

ಜನತೆಯ ಜೀವನ ದಿನ ದಿನಕ್ಕೂ ಹದಗೆಡಲು ಕಾರಣವಾದ ಭಾರತ ಸರಕಾರದ ಕಾರ್ಮಿಕ ವಿರೋಧಿ, ಜನವಿರೋಧಿ, ಆರ್ಥಿಕ ಧೋರಣೆಗಳ ವಿರುದ್ಧ ನಿರಂತರ ಚಳುವಳಿಗಾಗಿ ಸಿದ್ಧತೆ ನಡೆಸಲು ಕಾರ್ಮಿಕ ವರ್ಗಕ್ಕೆ ಕಾರ್ಮಿಕ ಸಂಘಗಳಿಗೆ ಎನ್ ಸಿ ಸಿ. ಕರನೀಡುತ್ತದೆ.

ಈ ಸಭೆಯ ಅಧ್ಯಕ್ಷತೆಯನ್ನು ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ಇಂದರ್‌ಜಿತ್‌ಗುಪ್ತಾ ವಹಿಸಿದ್ದರು.

ಎಚ್.ಎಂ.ಎಸ್.ನ ಉಮ್ರಾವ್‌ಮಲ್ ಪುರೋಹಿತ್, ಎಐಟಿಯುಸಿ ಯಿಂದ ಎನ್ ಸಿಂದ್ಧಾಂತ, ಸಿಐಟಿಯುನ ಎಂ. ಕೆ. ಪಂಧೆ, ನೃಸಿಂಗಚಕ್ರವರ್ತಿ ಬಿ.ಎಂ ಎಸ್.ನ ಆರ್.ಕೆ.ಭಕ್ತ, ಜಿ.ವಿ ವಾಸಿಷ್ಠ, ಇಂಟಕ್‌ನ ಜಿ.ಎಸ್. ದಾರಾ ಯುಟಿಯುಸಿ ನ ಪ್ರಸೂಲ್ ಜೋಷಿ, ಟಿಯುಸಿಸಿಯ ಆರ್. ಮುಖರ್ಜಿ ಭಾಗವಹಿಸಿದ್ದರು.

ಶಿಕ್ಷಣದ ಸವಾಲುಗಳಿಗೆ ಎಸ್. ಎಫ್. ಐ. ಉತ್ತರ

ಹಿಂದೆ 19.1.86 ರ ಸಂಚಿಕೆಯಲ್ಲಿ ರಾಜೀವ ಗಾಂಧಿಯವರ ನೂತನ ಶಿಕ್ಷಣ ನೀತಿಗೆ ಎಸ್. ಎಫ್. ಐ. ನೀಡಿದ ಉತ್ತರದ ಅನುವಾದದ ಪೂರ್ವಾರ್ಧವನ್ನು ಪ್ರಕಟಿಸಿದ್ದೆವು. ಈ ಉತ್ತರದ ಉತ್ತರಾರ್ಧವನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ. ಇದನ್ನು ಅನುವಾದ ಮಾಡಿದವರು ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಶ್ರೀ ಎಸ್. ಆರ್. ಆರಾಧ್ಯ.

ಖಾಸಗೀಕರಣ

ಈ ಉದ್ದೇಶಗಳ ಜೊತೆಯಲ್ಲಿ ಉನ್ನತ ಶಿಕ್ಷಣಕ್ಕೆ ನೀಡಲಾಗಿರುವ ಧನ ಸಹಾಯದ ಪ್ರಸ್ತುತ ಮಟ್ಟದ ವಿರುದ್ಧವಾಗಿಯೂ ದಾಖಲೆ ಪತ್ರವು ವಾದಿಸುತ್ತದೆ (ಪ್ಯಾರಾ 3 40). ಬೇರೆ ಮಾತುಗಳಲ್ಲಿ ಹೇಳುವುದಾದರೆ ಶುಲ್ಕವನ್ನು ಏರಿಸುವುದು ಮತ್ತು ಉನ್ನತ ಶಿಕ್ಷಣದಲ್ಲಿ ಖಾಸಗಿ ವ್ಯಾಪಾರವನು ಪ್ರೋತ್ಸಾಹಿಸುವುದಾಗಿದೆ. ಸರ್ಕಾರವು ವಿಸ್ತರಣೆಯನ್ನು ಸ್ಥಗಿತಗೊಳಿಸುತ್ತಿರುವಾಗ "ಶಿಕ್ಷಣದ ಅಭಿವೃದ್ಧಿಗೆ ಅದರಲ್ಲೂ ಉದ್ಯೋಗಾಧಾರಿತ ಮತ್ತು ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಖಾಸಗಿ ಉಧ್ಯಮಿಗಳಿಗೆ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಮತ್ತು ಸೂಕ್ತ ತೆರಿಗೆ ರಿಯಾಯಿತಿಗಳ ಮೂಲಕ ಸರ್ಕಾರವು ಪ್ರೋತ್ಸಾಹ ನೀಡಬೇಕು" (ಪ್ಯಾರಾ 4-69) ವಿದ್ಯಾರ್ಥಿಗಳಿಗೆ ಶುಲ್ಕ ಏರಿಕೆ ಮತ್ತು ಖಾಸಗಿ ಉಧ್ಯಮಿಗಳಿಗೆ ತೆರಿಗೆ ರಿಯಾಯಿತಿ. ದಾಖಲೆ ಪತ್ರವು ಕ್ಯಾಪಿಟೇಷನ್ ಶುಲ್ಕವನ್ನು ಸಮರ್ಥಿಸುವ ಹಂತಕ್ಕೂ ಹೋಗುತ್ತದೆ (ಪ್ಯಾರಾ 4.89) ಈ ಶಿಫಾರಸ್ಸುಗಳು ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಿ ಇದನ್ನೊಂದುಲಾಭಕೋರ ದಂಧೆಯನ್ನಾಗಿ ಮಾಡುತ್ತದೆ.

ಇದಕ್ಕೆ ಬದಲಾಗಿ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸಿ ಎಲ್ಲರಿಗೂ ಸಮಾನ ಅವಕಾಶ ಒದಗಿಸುವ ಸರ್ಕಾರದ ಜವಾಬ್ದಾರಿಯನ್ನು ಕಾರ್ಯಗತ ಗೊಳಿಸಬೇಕೆಂದು ಎಸ್. ಎಫ್. ಐ. ಒತ್ತಾಯಿಸುತ್ತದೆ.

ಪ್ರತ್ಯೇಕೀಕರಿಸುವುದು

ಉನ್ನತ ಶಿಕ್ಷಣವನ್ನು ಕಡಿತಗೊಳಿಸುವುದಕ್ಕೆ ಉಪಸಿದ್ಧಾಂತವಾಗಿ ಪದವಿಗಳನ್ನು ಉದ್ಯೋಗದಿಂದ ಪ್ರತ್ಯೇಕಿಸುವ ಸೂಚನೆ ಬಂದಿದೆ. "ಅತಿ ಪಾಂಡಿತ್ಯದ ಆಸಕ್ತಿ ಅಥವಾ ಯೋಗ್ಯತೆಯುಳ್ಳವರು ಮಾತ್ರ ಉನ್ನತ ಶಿಕ್ಷಣವನ್ನು ಪ್ರವೇಶಿಸುವಂತೆ ನೋಡಿಕೊಳ್ಳಲು ಪ್ರಥಮವಾಗಿ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ" (ಪ್ಯಾರಾ 4.83), ಆಗ "ಪದವಿಗಳನ್ನು ಉದ್ಯೋಗದಿಂದ ಪ್ರತ್ಯೇಕಿಸಿದರೆ ಪದವಿ ಶಿಕ್ಷಣದ ಹಂತದಲ್ಲಿ ಸಂಖ್ಯಾ ಒತ್ತಡವು ಗಣನೀಯವಾಗಿ ಪರಿಹಾರವಾಗುತ್ತದೆ........" [ಪ್ಯಾರಾ 4 84], ಹೀಗೆ ದಾಖಲೆ ಪತ್ರವು ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯನ್ನು, ನಿರುದ್ಯೋಗವನ್ನು ನಿವಾರಿಸುವ ಬದಲು ಅವರ ಶಿಕ್ಷಣವನ್ನೇ ಮೊಟಕುಗೊಳಿಸುವ ಮೂಲಕ ಪರಿಹರಿಸಲು ಸೂಚಿಸುತ್ತದೆ. ಆ ಮೂಲಕ ತಾನು ಶಿಕ್ಷಣ ನೀಡಲು ಸಾಧ್ಯವಾದ ಯುವ ಜನರಿಗೂ ಉದ್ಯೋಗ ಕಲ್ಪಿಸಲಾಗದಿರುವ ಅಪಮಾನಕಾರಿ ಸ್ಥಿತಿಯಿಂದ ಸರ್ಕಾರವು ನುಣುಚಿಕೊಳ್ಳುವುದು. ಯಾವಾಗ ಪದವಿಗಳು ಉದ್ಯೋಗದೊಂದಿಗೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲವೋ ಆಗ ವಿದ್ಯಾವಂತ ನಿರುದ್ಯೋಗಿಗಳ ಪರಿಕಲ್ಪನೆಯೇ ಉದ್ಭವಿಸುವುದಿಲ್ಲ ಇಂದಿನ ಪರಿಸ್ಥಿತಿಯಲ್ಲಿ ಪ್ರಥಮ ದ್ವಿತೀಯ ದರ್ಜೆಯೆಂದು ಹೇಳಲಾದ ಸೇವೆಗಳಿಗೆ ಮಾತ್ರ ಪದವಿಗಳ ಅರ್ಹತೆ ಅಗತ್ಯವಾಗಿದೆ. ಮೂರನೆಯ ದರ್ಜೆ ಮತ್ತು ನಾಲ್ಕನೆಯ ದರ್ಜೆಯ ನೌಕರಿಗಳಿಗೆ ಕ್ರಮವಾಗಿ ಮೆಟ್ರಿಕ್ [ಹತ್ತನೆಯ ತರಗತಿ] ಮತ್ತು ಮಾಧ್ಯಮಿಕ (7ನೇ ತರಗತಿ) ಹಂತದ ಅರ್ಹತೆ ಬೇಕಾಗುತ್ತದೆ. ಆದರೆ ವಾಸ್ತವಿಕವಾಗಿ ಡಾಕ್ಟರೇಟ್ ಪದವಿ ಸೇರಿದಂತೆ ವಿಶೇಷ ಅರ್ಹತೆ ಪಡೆದಿರುವ ಜನರೂ ಸಹ ನಾಲ್ಕನೆಯ ದರ್ಜೆಯ ನೌಕರಿ ಪಡೆಯಲೂ ಸಾಧ್ಯವಾಗುತ್ತಿಲ್ಲ, ಇಂತಹ ಸನ್ನಿವೇಶದಲ್ಲಿ ಈ ಸೂಚನೆಯು ಉದ್ಯೋಗ ಮಾರುಕಟ್ಟೆಯ ಲಕ್ಷಣವಾದ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತವನ್ನು ಕಾನೂನು ಬದ್ಧ ಗೊಳಿಸುತ್ತದೆ. ಶಿಕ್ಷಣವು ಜ್ಞಾನ ಮತ್ತು ನಿಪುಣತೆಯನ್ನು ವೃದ್ಧಿಗೊಳಿಸುವ ಪ್ರಕ್ರಿಯೆಯಾಗುವ ಬದಲು ಉದ್ಯೋಗ ಪಡೆಯುವ ಪಾಸ್ ಪೋರ್ಟ್ ಮಟ್ಟಕ್ಕೆ ಇಳಿದಿರುವುದೇ ಅವಹೇಳನಕಾರಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರತ್ಯೇಕೀಕರಣವು ನಮ್ಮ ಸಮಾಜದಲ್ಲಿ ಶಿಕ್ಷಣದ ಮೌಲ್ಯವನ್ನು ಮತ್ತಷ್ಟು ಕೆಳಗಿಳಿಸುತ್ತದೆ. ವಿಶ್ವವಿದ್ಯಾಲಯಗಳಿಗೆ ಹೋಗದೆ ಯುವಜನರು ಇನ್ನು ಮುಂದೆ ಉದ್ಯೋಗಗಳನ್ನು ಪಡೆಯಬಹುದೆಂಬ ಪೊಳ್ಳು ಭರವಸೆಯೇ ಈ ಸಲಹೆಯ ಹಿಂದಿರುವ ರಾಜಕೀಯ ಕೋನವಾಗಿದೆ. ಈ ಸಲಹೆಯ ಒಟ್ಟಾರೆ ಫಲಿತಾಂಶವೆಂದರೆಯುವಜನರು ಶಿಕ್ಷಣವನ್ನಾಗಲೀ ಉದ್ಯೋಗವನ್ನಾಗಲೀ, ಎರಡನ್ನೂ ಪಡೆಯಲಾಗುವುದಿಲ್ಲ. ಶಿಕ್ಷಣ ಸೌಲಭ್ಯಗಳ ವಿಸ್ತರಣೆ, ಸರ್ವರಿಗೂ ಸಮಾನಾವಕಾಶ. ಮತ್ತು ಉದ್ಯೋಗದ ಹಕ್ಕನ್ನು ಸಂವಿಧಾನಬದ್ಧ ಮೂಲಭೂತ ಹಕ್ಕನ್ನಾಗಿ ಖಾತರಿಪಡಿಸಬೇಕೆಂಬುದು ಎಸ್ ಎಫ್ ಐ ನ ಬೇಡಿಕೆಯಾಗಿದೆ.

ಪಠ್ಯ ಕ್ರಮ

ಬಹಳ ತಡವಾಗಿಯಾದರೂ ಸರ್ಕಾರದ ಪ್ರವರ್ತಕರಿಂದ ರಾಷ್ಟ್ರೀಯ ಭಾವೈಕ್ಯತೆಯ ಭಾವನೆಯನ್ನು ಮೂಡಿಸುವ ಸಲುವಾಗಿ ಪಠ್ಯಕ್ರಮಗಳನ್ನು ಪುನರ್‌ರಚಿಸುವ ಬಗ್ಗೆ ವಿಪರೀತ ಕಾಳಜಿ ವ್ಯಕ್ತವಾಗಿದೆ. "ಶಿಕ್ಷಣ ಯೋಜನೆಗಳಿಗೆ ಗುರಿ ದಿಕ್ಸೂಚಿ" ಎಂಬ ವಿಭಾಗದಲ್ಲಿ ದಾಖಲೆಪತ್ರವು ಅನೇಕ ಪರಿಕಲ್ಪನೆಗಳನ್ನು ಪಟ್ಟಿ ಮಾಡಲಾಗಿದೆ (ಪ್ಯಾರಾ 4 6ರಿಂದ 4.13) ಏನೇ ಆದರೂ ಇವುಗಳು ಹಿಂದಿಗಿಂತ ಭಿನ್ನವಾಗಿಲ್ಲವಲ್ಲದೆ ಸಲಹೆಗಳ ಬಗ್ಗೆ ದಾಖಲೆ ಪತ್ರವು ಅಗಾಧವಾದ ಅಸ್ಪಷ್ಟತೆಯನ್ನು ತಳೆದಿದೆ.

ಮತೀಯ ಅಂಧಾಭಿಮಾನವು ಈಗಾಗಲೇ ನಮ್ಮ ಸಾಮಾಜಿಕ ಚೌಕಟ್ಟು ಹಾಗೆಯೇ ಶಿಕ್ಷಣ ಪದ್ಧತಿಯಲ್ಲೂ ಹಾವಳಿಯನ್ನುಂಟು ಮಾಡಿದೆ. ಅಂಧಾಭಿಮಾನ ಮತ್ತು ಮತಿಯ ಮೌಲ್ಯಗಳು "ನೀತಿ ವಿಜ್ಞಾನ" ದ ಮುಸುಕಿನಲ್ಲಿ ನಮ್ಮನ್ನು ಕಾಡಿಸುತ್ತಿದ್ದು ಶಿಕ್ಷಣದಲ್ಲಿ ಧಾರ್ಮಿಕ ಹಸ್ತಕ್ಷೇಪ ಮತ್ತು ಧಾರ್ಮಿಕ ನಾಯಕರಿಗೆ ನೇರವಾದ ಪೋಷಣೆ ನೀಡಲಾಗಿದೆ, ಶಿಕ್ಷಣವನ್ನು ಧರ್ಮದಿಂದ ಪ್ರತ್ಯೇಕಿಸುವುದು ಅವಶ್ಯಕವಾಗಿದೆ.

ಶಿಕ್ಷಣವು ಅಂಗೀಕೃತ ಪ್ರಜಾಸತ್ತಾತ್ಮಕ ಜಾತ್ಯಾತೀತ ಮೌಲ್ಯಗಳ ಆಧಾರಿತವಾಗಿದ್ದು ಭಾರತೀಯ ಪ್ರಜ್ಞೆಯನ್ನುಂಟುಮಾಡುವತ್ತ ಉದ್ದೇಶಿತವಾಗಿರಬೇಕು ಈ ತಿರುಳನ್ನು ಏಕ ಪ್ರಕಾರವಾಗಿ ಅಳವಡಿಸಿಕೊಳ್ಳದಿದ್ದಲ್ಲಿ ನಮ್ಮ ದೇಶದ ಸಾಮಾಜಿಕ ಚೌಕಟ್ಟು ಭಾವೈಕ್ಯತೆಯನ್ನು ಸಂರಕ್ಷಿಸಲು ಸಾಧ್ಯವಿಲ್ಲವೆಂದು ರಾಷ್ಟ್ರವನ್ನು ಎಚ್ಚರಿಸಬೇಕು. ಅದರಲ್ಲೂ ಸಾಮ್ರಾಜ್ಯಶಾಹಿ ಮತ್ತು ಛಿದ್ರಕಾರಿ ಶಕ್ತಿಗಳ ಧಾಳಿಗಳನ್ನು ನಾವು ಎದುರಿಸುತ್ತಿರುವಾಗ ಇದು ನಿಖರ ಸತ್ಯವಾಗಿದೆ.

ಪರೀಕ್ಷೆಗಳು

ಪ್ಯಾರಾ 4.126 ರಲ್ಲಿ ಹೇಳಿರುವಂತೆ ಪರೀಕ್ಷಾ ಪದ್ಧತಿಯ ಕುರಿತ ದೋಷಾರೋಪಣೆಯನ್ನು ಎಸ್. ಎಫ್. ಐ. ಸಂಪೂರ್ಣವಾಗಿ ಒಪ್ಪುತ್ತದೆ. ಏನೇ ಆದರೂ ಅದರಲ್ಲಿನ ವಿಶ್ಲೇಷಣೆಯನ್ನು ನಾವು ವಿರೋಧಿಸುತ್ತೇನೆ. ಪರೀಕ್ಷೆಗಳಿಂದಾಗಿಯೇ ಗುಣಮಟ್ಟವು ಕ್ಷೀಣಿಸುತ್ತಿಲ್ಲ. ಪರೀಕ್ಷೆಗಳು ಮತ್ತು ಪದವಿಗಳು ಮೇಲೆತಿಳಿಸಿದಂತೆ ಉದ್ಯೋಗದ ಪಾಸ್ ಪೋರ್ಟ್‌ಗಳಾಗಿವೆ. ಸರ್ವರಿಗೂ ಶಿಕ್ಷಣ ಮತ್ತು ಉದ್ಯೋಗವನ್ನು ದೊರಕಿಸಿದಾಗ ಮಾತ್ರವೇ ಪರೀಕ್ಷೆಗಳನ್ನು ಬೇರೆ ರೀತಿಯಲ್ಲಿ ಪರಿಗಣಿಸಲಾಗುವುದು.

ಇಂದಿನ ಪರೀಕ್ಷೆಗಳು ಒಂದು ಹೊರೆಯಾಗಿದ್ದು ಗುಣಮಟ್ಟದಿಂದ ದೂರವಾಗಿರುವ ವಾಸ್ತವಾಂಶದೊಂದಿಗೆ ವಿದ್ಯಾರ್ಥಿಗಳನ್ನು ತೊಡೆದು ಹಾಕುವ ಮೂಲಕ ಉನ್ನತ ಶಿಕ್ಷಣವನ್ನು ಮೊಟಕುಗೊಳಿಸುವ ಪ್ರಯತ್ನಗಳನ್ನು ಬಲಪಡಿಸುವ ಹಂತಗಳು ಸಹ ಆಗಿವೆ.

ವಿದ್ಯಾರ್ಥಿಗಳನ್ನು ಮುಂದಿನ ಶಿಕ್ಷಣವನ್ನು ತಡೆಯುವುದಕ್ಕೆ ಬದಲು ತಮ್ಮ ನ್ಯೂನತೆಗಳನ್ನು ನಿವಾರಿಸಿಕೊಳ್ಳಲು ಸಹಾಯಕವಾಗುವಂತೆ ಪರೀಕ್ಷಾ ಪದ್ಧತಿಯನ್ನು ಮಾರ್ಪಡಿಸಬೇಕೆಂದು ಎಸ್. ಎಫ್ ಐ ಒತ್ತಾಯಿಸುತ್ತದೆ.

ಭಾಷಾ ನೀತಿ

ನಮ್ಮ ಅಭಿಪ್ರಾಯದಲ್ಲಿ ದಾಖಲೆ ಪತ್ರವು ಈ ಪ್ರಶ್ನೆಯ ಬಗ್ಗೆ ಉದ್ದೇಶಪೂರ್ವಕವಾಗಿಯೇ ಮೌನ ತಳೆದಿದೆ. ನನ್ನ ನೆನಪನ್ನು ಎಚ್ಚರಿಸಲು, 1948 ರಷ್ಟು ಹಿಂದೆಯೇ, ಶಿಕ್ಷಣ ಸಚಿವಾಲಯವು ಎಲ್ಲಾ ಹಂತಗಳಲ್ಲೂ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಿರಬೇಕೆಂದು ಒಂದು ನಿರ್ಣಯವನ್ನು ಅಂಗೀಕರಿಸಿತ್ತು. ಆದರೂ ವಿದ್ಯಾರ್ಥಿಗಳ ಅನವಶ್ಯಕ ಹೊರೆಯನ್ನು ಹೇರುವ ತ್ರಿಭಾಷಾ ಸೂತ್ರವನ್ನು ಇನ್ನೂ ಅನುಸರಿಸಲಾಗುತ್ತಿದೆ. ಮಾತೃಭಾಷೆ ಶಿಕ್ಷಣ ಮಾಧ್ಯಮವಾಗುವವರೆಗೆ ಅನಕ್ಷರತೆಯನ್ನು ತೊಡೆದುಹಾಕುವ ಯಾವ ಕಾರ್ಯಕ್ರಮವೂ ಯಶಸ್ವಿಯಾಗಲಾರದು. ತ್ರಿಭಾಷಾ ಸೂತ್ರವನ್ನು ಮುಂದುವರಿಸಲು ಒತ್ತಾಯಿಸುತ್ತಿರುವುದು ನಮ್ಮ ಅಭಿಪ್ರಾಯದಲ್ಲಿ ಅನಕ್ಷರತೆಯನ್ನು ತೊಡೆದುಹಾಕುವ ಸರ್ಕಾರದ ಜವಾಬ್ದಾರಿಯನ್ನು ನಿರಾಕರಿಸುವುದರ ಪ್ರತಿಬಿಂಬವಾಗಿದೆ.

ಎಲ್ಲಾ ಹಂತಗಳಲ್ಲೂ ಶಿಕ್ಷಣದ ಮಾಧ್ಯಮವು ಮಾತೃಭಾಷೆಯಾಗಿರಬೇಕು ಮತ್ತು ಶಾಲಾ ಶಿಕ್ಷಣದ ವಿವಿಧ ಘಟ್ಟಗಳಲ್ಲಿ ಇತರೆ ಭಾಷೆಗಳನ್ನು ಪರಿಚಯಿಸಬೇಕೆಂದು ಎಸ್. ಎಫ್ ಐ. ಒತ್ತಾಯಿಸುತ್ತದೆ. ತ್ರಿಭಾಷಾ ಸೂತ್ರವನ್ನು ಜಾರಿಗೊಳಿಸದಿದ್ದಲ್ಲಿ ನಾಳಿನ ಭಾರತದಲ್ಲಿ ಸಂಚಾರಕ್ಕೆ ಭಾಷೆಯು ಒಂದು ಅಡಚಣೆಯಾಗಬಹುದೆಂಬ ಪ್ಯಾರಾ 4.44 ರಲ್ಲಿರುವ ತಿಳುವಳಿಕೆಗೆ ಎಸ್ ಎಫ್. ಐ. ಸಂಪೂರ್ಣವಾಗಿ ಅಸಮ್ಮತಿಸುತ್ತದೆ. ಮಾತೃಭಾಷೆಯ ಮಾಧ್ಯಮವು ಇತರ ಭಾಷೆಗಳನ್ನು ಕಲಿಯಲು ಪೀಠಿಕೆಯಾಗುವುದಿಲ್ಲ. ಕ್ರಮೇಣವಾಗಿ ಪರಿಚಯಿಸಬೇಕಾದ ವಿಪರೀತ ಭಾಷೆಗಳ ಹೊರೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸಬಾರದು.

ಕೇಂದ್ರ – ರಾಜ್ಯ ಸಂಬಂಧಗಳು

ಅನೌಪಚಾರಿಕ ಶಿಕ್ಷಣಕ್ಕೆ ಭಾಗಶಃ ಧನಸಹಾಯ ನೀಡುವುದಕ್ಕೆ ಮಾತ್ರ ರಾಜ್ಯಗಳಿಗೆ ಕೇಂದ್ರದ ಕೊಡುಗೆಯು ಸೀಮಿತವಾಗಿರುವುದೆಂದು ನೂತನ ನೀತಿಯು ಸ್ಪಷ್ಟಪಡಿಸುತ್ತದೆ. ಈ ವಿಭಾಗದಲ್ಲೂ ಹಣ ವಿನಿಯೋಗವು84-85ರ 21.79 ಕೋಟಿ ರೂಗಳಿಂದ 1985-86 ರಲ್ಲಿ 12.2 ಕೋಟಿ ರೂಗಳು ಇಳಿಸಲಾಗಿದೆ. ಹೀಗಾಗಿ ಶಿಕ್ಷಣದ ಸಾರ್ವತ್ರೀಕರಣದ ಮೂಲಭೂತ ಜವಾಬ್ದಾರಿಯು ರಾಜ್ಯಗಳ ಹೊಣೆಯಾಗಿದ್ದು ಕೇಂದ್ರವು ತೀವ್ರ ಹಣಕಾಸು ಮಿತಿಗಳನ್ನು ಹೇರುತ್ತಿದೆ.

ಅಧಿಕಾರದ ಕೇಂದ್ರೀಕರಣವಾಗುತ್ತಿರುವುದರ ಸಮಯದಲ್ಲೇ ರಾಜ್ಯಗಳ ಮೇಲೆ ಹೊಣೆಗಾರಿಕೆಯ ಭಾರವು ಬೀಳುತ್ತಿದೆ. ಶಿಕ್ಷಣವನ್ನು ರಾಜ್ಯಗಳ ಪಟ್ಟಿಯಿಂದ ಜಂಟಿ ಖಾತೆಗೆ ವರ್ಗಾಯಿಸಿದಾಗ ಶಿಕ್ಷಣ ರಂಗದಲ್ಲಿ ಇದು ಸ್ಪಷ್ಟವಾಗಿ ಗೋಚರವಾಗಿದೆ. ಇದು ಕೇಂದ್ರದಲ್ಲಿ ರಾಜಕೀಯ ಮತ್ತು ಆರ್ಥಿಕ ಅಧಿಕಾರವನ್ನು ಕೇಂದ್ರೀಕರಿಸುವ ಸರ್ವ ಪ್ರಯತ್ನದ ಭಾಗವಾಗಿದೆ.

ಕೇಂದ್ರೀಕರಣದತ್ತ ಹೋಗುತ್ತಿರುವ ಈ ಪ್ರಯತ್ನದ ಅಪಾಯಕಾರಿ ಪರಿಣಾಮಗಳ ಬಗ್ಗೆ ನಾವು ಸರ್ಕಾರವನ್ನು ಎಚ್ಚರಿಸಬಯಸುತ್ತೇವೆ ಮೊಟ್ಟಮೊದಲನೆಯದಾಗಿ ಅತ್ಯಂತ ಅಪಾಯಕಾರಿಯಾದ ಅಂಶವೆಂದರೆ ದಾಖಲೆ ಪತ್ರವು ಕಾಳಜಿ ತೋರಿಸಿರುವ ರಾಷ್ಟ್ರೀಯ ಭಾವೈಕ್ಯತೆಗೇ ಬೆದರಿಕೆಯನ್ನೊಡ್ಡುವ ಪ್ರಾದೇಶಿಕ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳಿಗೆಕುಮ್ಮಕ್ಕು ದೊರೆಯುತ್ತದೆ. ಎರಡನೆಯದಾಗಿ ರಾಜ್ಯ ಸರ್ಕಾರಗಳ ಮೇಲೆ ಹೇರಲಾಗುವ ಆರ್ಥಿಕ ಮಿತಿಗಳಿಂದಾಗಿ ಸರ್ಕಾರದ ಅಸಮರ್ಪಕವಾದ ನೀತಿಗಳನ್ನು ಜಾರಿಗೊಳಿಸಲು ಸಹ ಅವುಗಳು ಅಶಕ್ತವಾಗುತ್ತವೆ.

ರಾಷ್ಟ್ರೀಯ ಐಕ್ಯತೆಯು ಸರ್ಕಾರದ ನಿಜವಾದ ಕಳಕಳಿಯಾಗಿದ್ದಲ್ಲಿ ಮತ್ತು ತನ್ನ ನೀತಿಗಳನ್ನು ಜಾರಿಗೊಳಿಸುವ ಬಗ್ಗೆ ಗಂಭೀರತೆಯಿದ್ದಲ್ಲಿ ಶಿಕ್ಷಣವನ್ನು ರಾಜ್ಯಗಳ ಪಟ್ಟಿಗೆ ಪುನಃ ವರ್ಗಾಯಿಸಬೇಕು ವಿವಿಧ ಪ್ರದೇಶಗಳ ಸಾಂಸ್ಕೃತಿಕ ಪರಂಪರೆಯ ಉತ್ತಮಾಂಶಗಳನ್ನು ಪೋಷಿಸಿ ಅವುಗಳ ಕೊಡುಗೆಯನ್ನು ಸ್ವೀಕರಿಸಿ ರಾಷ್ಟ್ರೀಯ ಐಕ್ಯತೆ, ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಆಧರಿಸಿದ ಶಿಕ್ಷಣ ನೀತಿಯ ಬೆಳವಣಿಗೆಗೆ ಸಹಾಯ ನೀಡಲು ಮತ್ತು ಸಮನ್ವಯಗೊಳಿಸುವ ಪಾತ್ರವನ್ನು ಕೇಂದ್ರವು ನಿರ್ವಹಿಸಬೇಕು. ಇದಕ್ಕಾಗಿ ಎಸ್ ಎಫ್. ಐ. ಸತತವಾಗಿ ಹೋರಾಡುತ್ತಿದ್ದು ಮುಂದೆಯೂ ಮುಂದುವರಿಸುವುದು.

ರಾಜಕೀಯ ರಹಿತ ಗೊಳಿಸುವುದು

'ವಿಶ್ವ ವಿದ್ಯಾಲಯಗಳ ಪರಿಶುದ್ಧೀಕರಣ'ದ ಬಗ್ಗೆ ದಾಖಲೆ ಪತ್ರವು ಕಾಳಜಿಯನ್ನು ವ್ಯಕ್ತಪಡಿಸಿದ್ದು 'ಶಿಕ್ಷಣವನ್ನು ರಾಜಕೀಯದಿಂದ ಪ್ರತ್ಯೇಕಿಸುವ' ಅವಶ್ಯಕತೆಯನ್ನು ಒತ್ತಿಹೇಳಿದೆ

ಪ್ಯಾರಾ 4.135 ಸಂಬಂಧಪಟ್ಟಂತೆಯೂ ಸ್ವಯಂ ನಿರ್ಬಂಧವನ್ನು ವಿಧಿಸಿಕೊಳ್ಳಬೇಕೆಂಬ ಪ್ರತಿಪಾದನೆಯನ್ನು ಇದು ಮುಂದುವರಿಸುತ್ತದೆ. ಏನೇ ಆದರೂ ಈ ಪ್ರಶ್ನೆಯ ಬಗ್ಗೆ ರಾಷ್ಟ್ರೀಯ ಒಮ್ಮತವನ್ನು ಸಾಧಿಸಲು ಸಲಹೆ ಮಾಡುವುದರ ಹೊರತಾಗಿ ವಿಶ್ವವಿದ್ಯಾಲಯ ಸಮುದಾಯದ ಮೇಲಿನ ಗಂಭೀರ ಧಾಳಿಗಳ ಕುರಿತು ಯಾವುದೇ ಪ್ರಸ್ತಾಪವನ್ನು ಮಾಡುವುದಿಲ್ಲ. ಸ್ವಯಂ ನಿರ್ಬಂಧಕ್ಕಾಗಿ ವಾದಿಸುತ್ತಿರುವ ದಾಖಲೆಪತ್ರವು ಈಗಾಗಲೇ ಕೈಗೊಂಡಿರುವ ಶಾಸನ ಕ್ರಮಗಳು ವಿಶ್ವವಿದ್ಯಾಲಯ ಕ್ಯಾಂಪಸ್‌ಗಳಲ್ಲಿನ ಭಿನ್ನಮತದ ಪ್ರಜಾಪ್ರಭುತ್ವ ಹಕ್ಕನ್ನು ದಮನಗೊಳಿಸುವತ್ತ ನಿರ್ದೇಶಿತವಾಗಿರುವುದರ ಬಗ್ಗೆ ಗಮನಹರಿಸುವಲ್ಲಿ ವಿಫಲವಾಗಿದೆ.

ವಿಶ್ವ ವಿದ್ಯಾಲಯ ಸಮುದಾಯವು ಸಂಘಗಳಿಗೆ ಸೆನೆಟ್ ಮತ್ತು ಸಿಂಡಿಕೇಟ್‌ಗಳಿಗೆ ತನ್ನ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ನಾಶಗೊಳಿಸುವ ವಿಶ್ವಭಾರತಿ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಶಾಸನಬದ್ಧಗೊಳಿಸಿದೆ. ಅನೇಕ ರಾಜ್ಯ ಸರ್ಕಾರಗಳೂ ಇಂತಹದೇ ಶಾಸನ ಕ್ರಮಗಳನ್ನು ಕೈಗೊಂಡಿವೆ ಉದಾ : ಮಹಾರಾಷ್ಟ್ರದಲ್ಲಿ ವಿಶ್ವವಿದ್ಯಾಲಯ ಸಮುದಾಯದ ಹಕ್ಕುಗಳನ್ನು ಸಂಪೂರ್ಣವಾಗಿ ವಿಕೃತಗೊಳಿಸಿ ಆಡಳಿತ ಮಂಡಳಿಗಳಲ್ಲಿ ತನ್ನ ಪ್ರಾತಿನಿಧ್ಯವನ್ನು ಸಮಾಲೋಚನೆಯ ಹೆಸರಿನಲ್ಲಿ ವಂಚನೆಯಾಗಿ ಪರಿವರ್ತಿಸಲಾಗಿದೆ ಅನೇಕ ರಾಜ್ಯ ಸರ್ಕಾರಗಳು ಐ ಎ ಎಸ್. ಅಧಿಕಾರಿಗಳನ್ನು ಮತ್ತು ಕೆಲವೆಡೆ ಐ ಪಿ ಎಸ್. ಅಧಿಕಾರಿಗಳನ್ನು ಉಪಕುಲಪತಿಗಳಾಗಿ ನೇಮಕ ಮಾಡುವ ಹಂತಕ್ಕೆ ತಲುಪಿವೆ ವಿಶ್ವವಿದ್ಯಾಲಯಗಳ ಆಡಳಿತ ನಿರ್ವಹಣೆಯನ್ನು ಕೇವಲ ಒಂದು ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯಾಗಿ ನೋಡಲಾಗುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ ಪೋಲೀಸ್ ಠಾಣೆಗಳನ್ನು ಸ್ಥಾಪಿಸುವ ಪೋಲೀಸ್ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸಲಾಗಿದ್ದು ದೆಹಲಿ ವಿಶ್ವವಿದ್ಯಾಲಯವು ಇತ್ತೀಚಿಗಿನ ಉದಾಹರಣೆಯಾಗಿದೆ 'ವಿದ್ಯಾರ್ಥಿ ಅಶಿಸ್ತು' ತಡೆಗಟ್ಟುವ ಹೆಸರಿನಲ್ಲಿ ಇದೆಲ್ಲವನ್ನು ಮಾಡಲಾಗುತ್ತಿದೆ. ಈ ಬಗ್ಗೆ ಕೊಠಾರಿ ಆಯೋಗವು ಏನು ಹೇಳುತ್ತದೆಯೆಂಬುದನ್ನು ಪರಿಶೀಲಿಸುವುದು ಕುತೂಹಲಕಾರಿಯಾಗಿದ್ದು ಬೆಳಕು ಚೆಲ್ಲುತ್ತದೆ. "ಈ ರೀತಿಯ ಅನಾಗರೀಕ ವರ್ತನೆಯ ಅಸಹ್ಯಕರ ಪ್ರವೃತ್ತಿಗಳಿಗೆ ಅನೇಕ ರೀತಿಯ ಕಾರಣಗಳಿವೆ. ಉದಾ : ಅನಿಶ್ಚಿತ ಭವಿಷ್ಯವು ಯುವಜನತೆಯಲ್ಲಿ ಬೇಜವಾಬ್ದಾರಿತನವನ್ನು ಬೆಳೆಸುವ ಹತಾಶ ಭಾವನೆಯನ್ನು ಮೂಡಿಸುತ್ತದೆ, ಅನೇಕ ಪಠ್ಯ ಕಾರ್ಯಕ್ರಮಗಳ ಯಾಂತ್ರಿಕ ಮತ್ತು ಅತೃಪ್ತಿಕರ ಸ್ವರೂಪ, ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮತ್ತು ಕಲಿಯುವಿಕೆಗೆ ಒಟ್ಟಾರೆ ಅಸಮರ್ಪಕವಾಗಿರುವ ಸೌಲಭ್ಯಗಳು, ವಿದ್ಯಾರ್ಥಿ- ಶಿಕ್ಷಕರ ರಿಕ್ತ ಸಂಪರ್ಕ........" ಆದ್ದರಿಂದ ಶಿಕ್ಷಣ ಸೌಲಭ್ಯಗಳನ್ನು ಉತ್ತಮಪಡಿಸದೆ ಅಶಿಸ್ತನ್ನು ನಿಯಂತ್ರಿಸುವ ಪ್ರಯತ್ನವು ನಿಷ್ಫಲವಾಗುವುದೆಂಬುದು ಸ್ಪಷ್ಟವಾಗಿದೆ.

ಅಶಿಸ್ತಿನ ಬಗ್ಗೆ ಸರ್ಕಾರದ ಕಳಕಳಿಯು ಪ್ರಾಮಾಣಿಕವಾಗಿಲ್ಲವೆಂಬುದು ಈ ಧಾಳಿಗಳ ಪೆಟ್ಟು ಎಸ್.ಎಫ್.ಐ ನಂತಹ ಸಂಘಟನೆಗಳ ವಿರುದ್ಧವಾಗಿ ನಿರ್ದೇಶಿತವಾಗಿದೆಯೆಂಬವಾಸ್ತವಾಂಶದಿಂದ ಸ್ಪಷ್ಟವಾಗಿದೆ. ಕ್ಯಾಂಪಸುಗಳಲ್ಲಿ ಪ್ರಜಾಸತ್ತಾತ್ಮಕ, ಜಾತ್ಯಾತೀತ, ಶೈಕ್ಷಣಿಕ ಪರಿಸರ ನಿರ್ಮಾಣಕ್ಕಾಗಿ ಎಸ್.ಎಫ್.ಐ. ಪ್ರಾರಂಭವಾದಂದಿನಿಂದಲೂ ಸತತವಾಗಿ ಹೋರಾಡುತ್ತಿದೆ. ಈ ಸಂಬಂಧದಲ್ಲಿ ವಿದ್ಯಾರ್ಥಿ ರಾಜಕೀಯದಲ್ಲಿ ಅರಾಜಕತೆ ಮತ್ತು ಗೂಂಡಾಗಿರಿಯನ್ನು ಹರಡುವ ಶಕ್ತಿಗಳಿಂದ ಎಸ್.ಎಫ್.ಐ. ಬಲವಾದ ಪ್ರತಿರೋಧವನ್ನು ಎದುರಿಸಬೇಕಾಗಿ ಬಂದಿದೆ. ಸಾಮೂಹಿಕ ನಕಲಿನ ವಿರುದ್ಧ ಎಸ್.ಎಫ್ ಐ ನ ತತ್ವಬದ್ಧ ನಿಲುವೆಯು ಅಂತಹ ಒಂದು ಉದಾಹರಣೆಯಾಗಿದೆ. ವಿಶ್ವವಿದ್ಯಾಲಯ ಸಮುದಾಯದ ವಿಭಿನ್ನ ವಿಭಾಗಗಳಿಗೆ ಸಂಘಟಿತರಾಗಿ ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಚಲಾಯಿಸಲು ಮತ್ತು ಅಂತಹ ವಿಛಿದ್ರಕಾರಿ ಪ್ರವೃತ್ತಿಗಳ ವಿರುದ್ಧ ಹೋರಾಡಲು ಅವಕಾಶ ನೀಡಿದಲ್ಲಿ ಮಾತ್ರ ಶೈಕ್ಷಣಿಕ ಪರಿಸರವನ್ನು ನಿರ್ಮಿಸಲು ಸಾಧ್ಯವೆಂಬುದು ಎಸ್.ಎಫ್ ಐ. ನ ಈ ಅನುಭವದಿಂದ ಸ್ಪಷ್ಟವಾಗಿದೆ.

ಪಂಡಿತ್ ಜವಹರಲಾಲ್ ನೆಹರೂರವರು ವಿಶ್ವ ವಿದ್ಯಾಲಯಗಳ ಕುರಿತು ಏನು ನುಡಿದಿದ್ದಾರೆಂಬುದನ್ನು ತಮಗೆ ಉಲ್ಲೇಖಿಸುವ ಸ್ವಾತಂತ್ರ್ಯವನ್ನು ನಾವಿಲ್ಲಿ ತೆಗೆದುಕೊಳ್ಳಬಹುದೇ ? "ಒಂದು ವಿಶ್ವವಿದ್ಯಾನಿಲಯವು ಮಾನವೀಯತೆ, ಸಂಯಮ, ವಿವೇಕ, ಕಲ್ಪನೆ, ಅನ್ವೇಷಣೆ ಮತ್ತು ಸತ್ಯ ಶೋಧನೆಯ ಪ್ರತೀಕವಾಗಿದೆ. ಇದು ಉನ್ನತ ಆದರ್ಶಗಳತ್ತ ಮಾನವ ಜನಾಂಗದ ಮುನ್ನಡೆಯ ಪ್ರತೀಕವಾಗಿದೆ. ವಿಶ್ವ ವಿದ್ಯಾಲಯಗಳು ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದಲ್ಲಿ ಅವು ಜನತೆ ಮತ್ತು ದೇಶದೊಂದಿಗೆ ಬೆಸೆಯುತ್ತವೆ "

ವ್ಯತಿರಿಕ್ತವಾಗಿ ವಿಶ್ವವಿದ್ಯಾಲಯಗಳನ್ನು ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಗಳೆಂಬಂತೆ ಪರಿಗಣಿಸುವುದರ ಉದ್ದೇಶ ವಿಶ್ವವಿದ್ಯಾಲಯಗಳ ದೈನಿಕೀಕರಣದ ಮೂಲಕ ಭಿನ್ನಮತವನ್ನು ತೊಡೆದು ಹಾಕಿ ಇಂದಿನ ಸಮಾಜ ವ್ಯವಸ್ಥೆಗೆ ವಿಶ್ವವಿದ್ಯಾಲಯ ಸಮುದಾಯವು ದಾಸ್ಯ ಪ್ರವೃತ್ತಿಯಿಂದ ಬದ್ಧವಾಗುವಂತೆ ಬಲಾತ್ಕರಿಸುವುದಾಗಿದೆ.

ನಮ್ಮ ದೇಶದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಮೂಹದ ಮುಂಚೂಣಿಯಾಗಿರುವ ಎಸ್. ಎಫ್. ಐ. ರಾಜಕೀಯ ಪರಿಶುದ್ಧೀಕರಣದ ಹೆಸರಿನಲ್ಲಿ ಅಂತಹ ಧಾಳಿಗಳನ್ನು ಸಹಿಸುವುದಿಲ್ಲ. ವಿದ್ಯಾರ್ಥಿ ಸಂಘಗಳನ್ನು ರಚಿಸುವ ಪ್ರಜಾಪ್ರಭುತ್ವ ಹಕ್ಕು ಮತ್ತು ಆಡಳಿತ ಮಂಡಳಿಗಳಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ವಿದ್ಯಾರ್ಥಿ ಸಮುದಾಯದ ಅಂತರ್ಗತವಾದ ಹಕ್ಕುಗಳಾಗಿವೆ. ಶಿಕ್ಷಣ ಪದ್ಧತಿಗೆ ಹೊಸ ಚಲನಾ ಶಕ್ತಿಯನ್ನು ತುಂಬುವ ಉದ್ದೇಶವಿರುವ ಯಾವುದೇ ಶಿಕ್ಷಣ ನೀತಿಯು ಅಂತಹ ಸರ್ವಾಧಿಕಾರಿ ಧೋರಣೆಗಳನ್ನು ಸಹಿಸುವುದಿಲ್ಲ.

ಆದ್ದರಿಂದ ನೂತನ ಶಿಕ್ಷಣ ನೀತಿಯ ದಾಖಲೆ ಪತ್ರದಲ್ಲಿ ಪ್ರಸ್ತಾಪಿಸಲಾಗಿರುವ ಸಲಹೆಗಳು ಅನಕ್ಷರತೆ ಮತ್ತು ನಿರುದ್ಯೋಗವನ್ನು ಅಧಿಕಗೊಳಿಸುವ ವ್ಯೂಹತಂತ್ರವಾಗಿದೆಯೆಂಬುದು ನಮ್ಮ ದೃಢನಿಶ್ಚಯವಾಗಿದೆ ಈ ಸಲಹೆಗಳನ್ನು ಹಿನ್ನಡೆಯ ಕ್ರಮಗಳೆಂದಲ್ಲದೆ ಬೇರೇನೆಂದೂ ಪರಿಗಣಿಸಲಾಗುವುದಿಲ್ಲ. ಇವುಗಳು ಅಂಗೀಕಾರವಾದಲ್ಲಿ ಭಾರತ ದೇಶವು ಅನಕ್ಷರಸ್ಥರು ಮತ್ತು ನಿರುದ್ಯೋಗಿಗಳ ಸೈನ್ಯದಲ್ಲಿ ಜಗತ್ತಿನಲ್ಲೇ ಮುಂಚೂಣಿಯಾಗಿ 21ನೇ ಶತಮಾನವನ್ನು ಪ್ರವೇಶಿಸುವುದು.

ಈ ಸಲಹೆಗಳನ್ನು ಹಿಂತಿರುಗಿಸಬೇಕೆಂದು ಮತ್ತು ಮೇಲೆ ತಿಳಿಸಲಾಗಿರುವ ವಿವಿಧ ಬೇಡಿಕೆಗಳನ್ನು ಅಂಗೀಕರಿಸಬೇಕೆಂದು ಎಸ್ ಎಫ್ ಐ ಒತ್ತಾಯಿಸುತ್ತದೆ.

(ನೂತನ ಶಿಕ್ಷಣ ನೀತಿಯ ಕುರಿತು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯಕ್ಕೆ ಎಸ್ ಎಫ್ ಐ ನೀಡಿರುವ ಉತ್ತರದ ಅನುವಾದ ರೂಪವು ಮುಗಿಯಿತು)

ಎಸ್. ಎಫ್. ಐ. ನ ದ. ಕ. ಜಿಲ್ಲಾ ಸಮ್ಮೇಳನದ ಕರೆ

'ಸಮಾಜದ ಪರಿಸರದಲ್ಲಿ ನಡೆಯುವ ಅನ್ಯಾಯವನ್ನು ಪ್ರತಿಭಟಿಸಿ'

ಇಂದಿನ ಸಮಾಜ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಹಾಗೂ ಪ್ರಭುತ್ವಕ್ಕೆ ಸಂಬಂಧವಿರುವುದರಿಂದ ಪ್ರಜ್ಞಾವಂತ ವಿದ್ಯಾರ್ಥಿ ವಿಭಾಗದವರು ಸಮಾಜದ ಪರಿಸರದಲ್ಲಿ ನಡೆಯುವ ಅನ್ಯಾಯವನ್ನು ಪ್ರತಿಭಟಿಸಬೇಕೆಂದು, ಜನವರಿ 26 ರಂದು ಉಡುಪಿಯ ಶ್ರೀ ಸುಧೀಂದ್ರ ತೀರ್ಥ ಕಲ್ಯಾಣ ಮಂಟಪದಲ್ಲಿ ಎಸ್. ಎಫ್.ಐ. ನಾಲ್ಕನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮಂಗಳೂರು ವಿ. ವಿ. ರಾಜಕೀಯ ಶಾಸ್ತ್ರ ವಿಭಾಗ ಮುಖ್ಯಸ್ಥರಾದ ಪ್ರೊ. ಕೆ. ರಾಘವೇಂದ್ರ ರಾವ ಹೇಳಿದರು. ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಶಿಕ್ಷಣ ಎಂಬುದು ಒಂದು ಮಾರಾಟ ಮಾಡುವ ಸರಕಾಗಿದೆ ಎಂದು ಹೇಳಿದರು.

ರಾಜ್ಯಸಮಿತಿ ಅಧ್ಯಕ್ಷರಾದ ಕಾಂ॥ ಆರ್. ಜಯಕುಮಾರ್ ಪ್ರಾರಂಭದಲ್ಲಿ ಧ್ವಜಾರೋಹಣವನ್ನು ಮಾಡಿದರು ಬಳಿಕ ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಪಟೇಕರ್ ಎಸ್.ಎಫ್.ಐ ಹುತಾತ್ಮ ಸಂಗಾತಿಗಳು ಸೇರಿದಂತೆ ಅನೇಕರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಮಂಡಿಸಿದರು. ಮಾಜಿ ಶಾಸಕರಾದ ಪಿ. ರಾಮಚಂದ್ರರಾವ್ ಕಾರ್ಮಿಕರು, ರೈತರ ಬಗ್ಗೆ ಗೌರವ ಮೂಡಿಸುವಂತಹ ದೃಷ್ಟಿಕೋನವನ್ನು ಶಿಕ್ಷಣ ಬೆಳೆಸಬೇಕೆಂದು ಹೇಳಿದರು. ಸಿಐಟಿಯು ಪರವಾಗಿ ಕೆ. ಶಂಕರ್, ಬಿಇಎಫ್ಐ ಪರವಾಗಿ ಬಿ.ಎಂ. ಮಾಧವ, ರಮೇಶ್‌ರಾವ್, ಡಿವೈಎಫ್ಐ ಪರವಾಗಿ ಶಿವಾನಂದ ಕೋಡಿ, ಮಹಾಬಲ ವಡೇರ ಹೋಬಳಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪರವಾಗಿ ಡಾ॥ ಸುಶೀಲಾ ಶುಭ ಸಂದೇಶ ನೀಡಿದರು. ಅಧ್ಯಕ್ಷತೆಯನ್ನು ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ವಿಶ್ವನಾಥ್ ವಹಿಸಿದ್ದರು. ಪ್ರಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾದ ಡಾ॥ ಅರ್ಕಿ ಮಣಿಪಾಲ್ ಸ್ವಾಗತ ಮಾಡುತ್ತಾ, ಉಡುಪಿಯಂತಹ ಶಿಕ್ಷಣ ಕೇಂದ್ರದಲ್ಲಿ ಪ್ರಗತಿಪರ ವಿದ್ಯಾರ್ಥಿ ಸಂಘಟನೆಯ ಸಮ್ಮೇಳನ ನಡೆಸುತ್ತಿರುವ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ ಎಲ್ಲರನ್ನೂ ಸ್ವಾಗತಿಸಿದರು.

ಕೆ. ವಿಶ್ವನಾಥ, ಗೋಪಾಲಪೆಂಜೆ, ಶ್ರೀಮತಿ ಕೋಡಿ, ಅಶೋಕ್‌ನಾಯಕರು ಅಧ್ಯಕ್ಷೀಯ ಮಂಡಳಿಯಲ್ಲಿದ್ದು ಜಿಲ್ಲಾ ಸಮ್ಮೇಳನ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಅಕ್ಷಮ್ಯ ಬೇಜವಾಬುದಾರಿತನದ ಫಲವಾದ ಬರ ಪರಿಸ್ಥಿತಿಯ ಪರಿಹಾರಕ್ಕಾಗಿ ತುರ್ತು ಕ್ರಮ ಕೈಗೊಳ್ಳುವಂತೆ, ವಿಶ್ವಸಂಸ್ಥೆ 1986 ವರ್ಷವನ್ನು ಅಂತರರಾಷ್ಟ್ರೀಯ ಶಾಂತಿ ವರ್ಷವೆಂದು ಘೋಷಿಸಿದ್ದನ್ನ ಸ್ವಾಗತಿಸಿ, ದ.ಆಫ್ರಿಕಾ ಜನತೆಯ ಹೋರಾಟವನ್ನು ಬೆಂಬಲಿಸಿ, ಶ್ರೀಲಂಕಾ ತಮಿಳರಿಗೆ ನಾಗರಿಕ ಹಕ್ಕುಗಳನ್ನು ನೀಡಬೇಕೆಂದು ಒತ್ತಾಯಿಸಿ, ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ನಿರ್ಣಯಗಳನ್ನು ಸ್ವೀಕರಿಸಿತು ಮಂಗಳೂರು ವಿಶ್ವ ವಿದ್ಯಾ ನಿಲಯಕ್ಕೆ ಆರ್ಥಿಕ ಸೌಲಭ್ಯ ನೀಡುವಂತೆ ಯೋಜನೆಗೆ ಒತ್ತಾಯಿಸಿತು.

ಪದಾಧಿಕಾರಿಗಳು

ರತ್ನಾಕರನ್, ಅಧ್ಯಕ್ಷರಾಗಿ, ಉಪಾಧ್ಯಕ್ಷರನ್ನಾಗಿ ಅಶೋಕ್ ನಾಯಕ್, ಸುನೀಲ್ ಪಟೇಕರ್ ಕಾರ್ಯದರ್ಶಿಯಾಗಿ ಜಂಟಿ ಕಾರ್ಯದರ್ಶಿಯಾಗಿ ಗಂಗಾಧರ ನಿಡಿಂಜಿ, ಖಜಾಂಚಿಯನ್ನಾಗಿ ಕೆ. ಎಂ. ಕೃಷ್ಣಪ್ಪ, ಕಾರ್ಯದರ್ಶಿ ಮಂಡಲದ ಸದಸ್ಯರನ್ನಾಗಿ ಶ್ರೀಮತಿ ಕೋಡಿ, ಚನ್ನಪ್ಪ ಶೆಟ್ಟಿಗಾರ್, ಪಿ ವಿಶ್ವನಾಥ್ ಜಯಚಂದ್ರನ್, ರಮಾನಾಥ್ ಭಂಡಾರಿ, ಜಿ. ಎಂ ಕೃಷ್ಣ, ಕೆ. ಪಿ ಸುಜಾತ, ಗೋಪಾಲಪೆಂಜೆ ರಾಮಚಂದ್ರ ಇವರನ್ನೊಳ್ಳ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

27 ರಂದು ಉಡುಪಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆ, ರಥ ಬೀದಿಯಲ್ಲಿ ಬಹಿರಂಗ ಸಭೆ ನಡೆಯಿತು. ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕ ಡಾ॥ ಪುರುಷೋತಮ ಬಿಳಿಮಲೆ ಹಾಗೂ ಎಸ್ ಎಫ್. ಐ. ನಾಯಕರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಚಿತ್ರದುರ್ಗ ಜಿಲ್ಲಾ ಸಮಾವೇಶ

ದಿನಾಂಕ 21.1.1985 ರಂದು ಚಳ್ಳಕೆರೆಯಲ್ಲಿ ಚಿತ್ರದುರ್ಗ ಜಿಲ್ಲಾ ಸಮಾವೇಶ ನಡೆಯಿತು. ಈ ಸಮಾವೇಶಕ್ಕೆ ಐದು ತಾಲೂಕಿನಿಂದ ಪ್ರತಿನಿಧಿಗಳು ಭಾಗವಹಿಸಿದ್ದರು ಪ್ರತಿನಿಧಿಗಳಾಗಿ ಸುಮಾರು 1:0 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. 80 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಮಧ್ಯಾನ 12ಗಂಟೆಗೆ ಧ್ವಜಾರೋಹಣದ ಕಾರ್ಯಕ್ರಮವನ್ನು ರಾಜ್ಯ ಸಮಿತಿಯ ಸದಸ್ಯರಾದ ಪ್ರಸನ್ನಕುಮಾರ್‌ರವರು ನಡೆಸಿದರು ನಂತರ ಸಭೆ ಪ್ರಾರಂಭವಾಯಿತು ಸಭೆಯ ಅಧ್ಯಕ್ಷತೆಯನ್ನು ಕೃಷ್ಣ ಜಿಕಲಾಲ್ ವಹಿಸಿದ್ದರು ಬಸವರಾಜ ಸ್ವಾಗತಿಸಿದರು.

ಉದ್ಘಾಟನೆಯನ್ನು. ರಾಜ್ಯ ಸಮಿತಿಯ ಕಾರ್ಯದರ್ಶಿಯಾದ ಎಸ್.ಆರ್ ಆರಾಧ್ಯರವರು ಮಾಡಿದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಪಿ.ರಾಮಚಂದ್ರರಾವ್ ಮಾತನಾಡಿದರು ರಾಜ್ಯಸಮಿತಿಯ ಕಾರ್ಯದರ್ಶಿ ಆರಾಧ್ಯ ರವರು ಎಸ್. ಎಫ್ ಐ. ನ ಸಂವಿಧಾನ, ಮುಖ್ಯೋದ್ದೇಶಗಳನ್ನು ತಿಳಿಸಿದರು ನಂತರ ಜಿಲ್ಲಾ ಸಂಘಟನೆಯ ಸಮಿತಿ ರಚನೆಯಾಯಿತು.

ಪಾರ್ಲಿಮೆಂಟರಿ ಸಂದರ್ಭ ಸಾಧಕತನ ಮತ್ತು ಗುಂಪುಗಾರಿಕೆಯ ವಿರುದ್ಧ ನಿರ್ಣಾಯಕ ಐಕ್ಯತೆ ಹಾಗೂ ಉಕ್ಕಿನಂತಹ ಶಿಸ್ತು

(1ನೇ ಪುಟದಿಂದ)

ಕಾರ್ಯತಂತ್ರ ಹಾಗೂ ಕಾರ್ಯ ಯೋಜನೆ

ಪಕ್ಷ ವಿವಿಧ ಸಂದರ್ಭಗಳಲ್ಲಿ ಮಾಡಿದ ಚುನಾವಣಾ ಹೊಂದಾಣಿಕೆಗಳೂ ಮೈತ್ರಿಗಳೂ, ಎಲ್ಲಾ ಪಕ್ಷ ಮತ್ತು ಸಂಘಟನೆಗಳಲ್ಲಿರುವ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಜನಸಾಮಾನ್ಯರ ಹಿತಾಸಕ್ತಿಗಳ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಐಕ್ಯ ಹೋರಾಟದಲ್ಲಿ ಒಂದುಗೂಡಿಸುವ ಕಾರ್ಯತಂತ್ರ ಮಾತ್ರ. ಆದರೆ ಈ ಕಾರ್ಯತಂತ್ರಗಳು ಯಾವತ್ತೂ, ಜಾತಿ, ಕೋಮು ಪ್ರತ್ಯೇಕತಾವಾದ ಮೊದಲಾದ ಎಲ್ಲಾ ದೇಶ ವಿರೋಧಿ ಸಿದ್ಧಾಂತ ಮತ್ತು ಸಂಘಟನೆಗಳ ವಿರುದ್ಧ ಹೋರಾಡುವ ಪಕ್ಷದ ಕಾರ್ಯ ಯೋಜನೆಗೆ (strategy) ಅಧೀನವಾಗಿವೆ ಹಾಗೂ ಅಧೀನವಾಗಿರಬೇಕು. ಇಂತಹ ಕೆಲವು ಪಕ್ಷಗಳೊಂದಿಗೆ ಸಿ ಪಿ ಐ (ಎಂ)ಚುನಾವಣಾ ಹೊಂದಾಣಿಕೆ ಅಥವಾ ಮೈತ್ರಿ ಸಾಧಿಸುವುದು, ಈ ಪಕ್ಷಗಳ ಪ್ರಭಾವದಲ್ಲಿರುವ ಜನ ಸಮುದಾಯಗಳನ್ನು ಐಕ್ಯ ಹೋರಾಟಗಳಿಗೆ ಗೆದ್ದುಕೊಳ್ಳುವುದಕ್ಕೇ ಹೊರತು ಈ ಸಂಘಟನೆಗಳ ಜಾಯಮಾನವಾಗಿರುವ ಪ್ರತ್ಯೇಕತಾವಾದವನ್ನು ಬಲಪಡಿಸಲಿಕ್ಕಲ್ಲ.

ಆದರೆ ದುರದೃಷ್ಟವಶಾತ್, ಕಾರ್ಯಯೋಜನೆ ಮತ್ತು ಕಾರ್ಯತಂತ್ರಗಳನ್ನು ಒಂದರೊಡನೊಂದು ಬೆರೆಸುವ, ಕಾರ್ಯತಂತ್ರಗಳನ್ನು ಕಾರ್ಯಯೋಜನೆಯ ಮಟ್ಟಕ್ಕೆ ಏರಿಸುವ ಪ್ರವೃತ್ತಿ ಪಕ್ಷದಲ್ಲಿ ಕಂಡು ಬಂದಿದೆ. ಇದು ರಾಜ್ಯದ ರಾಜಕೀಯ–ಚುನಾವಣಾ ಪರಿಸ್ಥಿತಿಯಿಂದಾಗಿ ಕೇರಳದಲ್ಲಿ ವಿಶೇಷವಾಗಿ ಪ್ರಬಲವಾಗಿದೆ. 1965 ರಲ್ಲಿ ಮುಸ್ಲಿಂ ಲೀಗ್‌ನೊಂದಿಗೆ ಚುನಾವಣಾ ಹೊಂದಾಣಿಕೆ, 1967 ರಲ್ಲಿ ಇನ್ನೂ ನಿಕಟವಾದ ಕಾರ್ಯಕ್ರಮ ಆಧಾರಿತ ಮೈತ್ರಿಕೂಟ, 1974 ರಲ್ಲಿ ಕೇರಳ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳಿಂದ ಒಡೆದು ಬಂದ ಗುಂಪುಗಳನ್ನು ವಿರೋಧಿ ಬಣಕ್ಕೆ ಸ್ವಾಗತಿಸಿದ್ದು, ಇದೇ ಮೈತ್ರಿ 1979-81 ರಲ್ಲಿ ಎಡ ಪ್ರಜಾಪ್ರಭುತ್ವ ರಂಗ ಮತ್ತು ಸರ್ಕಾರಗಳಾಗಿ ಪರಿವರ್ತಿತವಾದದ್ದು, ಇವೆಲ್ಲಾ ಕೇವಲ ಅಂದಿನ ಅಗತ್ಯ ಪೂರೈಸುವ ಕಾರ್ಯತಂತ್ರಗಳು ಮಾತ್ರ. ಎಡ ಪ್ರಜಾಪ್ರಭುತ್ವ ರಂಗದಿಂದ ಅಖಿಲ ಭಾರತ ಮುಸ್ಲಿಂ ಲೀಗ್ ಈಚೆಗೆ ನಿರ್ಗಮಿಸಿದ ನಂತರವೂ ಅದೇ ಹಳೆ ಕಾರ್ಯತಂತ್ರಗಳನ್ನು ಮುಂದುವರಿಸಬೇಕೆನ್ನುವವರು ಇವೆಲ್ಲಾ ಕಾರ್ಯತಂತ್ರಗಳೆಂದು ಮರೆತು ಬಿಡುತ್ತಾರೆ. ಮಾತ್ರವಲ್ಲ ಕಾರ್ಯತಂತ್ರಗಳನ್ನು ಮೂಲಭೂತ ಕಾರ್ಯಯೋಜನೆಯ ಮಟ್ಟಕ್ಕೆ ಏರಿಸುತ್ತಾರೆ.

ಕೋಮುವಾದಿ ಪಕ್ಷಗಳ ಹಂಚಿಕೆ

ಕೇರಳದಲ್ಲಿ 1967 ರ ನಂತರ ಉದ್ಭವಿಸಿದ ಪರಿಸ್ಥಿತಿಯನ್ನು ಜಾತಿ ಕೋಮು ಆಧಾರಿತ ಪಕ್ಷಗಳು ಮತ್ತು ಸಂಘಟನೆಗಳು ಪೂರ್ಣವಾಗಿ ತಮ್ಮ ಲಾಭಕ್ಕೆ ಬಳಸಿಕೊಂಡವು. ಕಮ್ಯುನಿಸ್ಟ್ ಪಕ್ಷದ ವಿರುದ್ಧ 1959-60 ರ ಸಂಘರ್ಷದಲ್ಲಿ ಈ ಸಂಘಟನೆಗಳಿಗೆ ಮೊದಲ ಬಾರಿಗೆ ಸ್ನೇಹ ಹಸ್ತ ಚಾಚಿದ ಕಾಂಗ್ರೆಸ್‌ನ ಕಾರ್ಯತಂತ್ರ ಮತ್ತು ಈ ತಂತ್ರಕ್ಕೆ ಸಿ.ಪಿ ಐ (ಎಂ) ಪ್ರತಿತಂತ್ರ ಹೂಡಿದಾಗ – ಇವು ಕಾಂಗ್ರೆಸ್ ಮತ್ತು ಸಿ ಪಿ ಐ (ಎಂ) ಜತೆಗೆ ಸರದಿಯಂತೆ ಚುನಾವಣಾ ರಾಜಕೀಯದಲ್ಲಿ ಸೇರುತ್ತಾ, ರಾಜ್ಯದ ರಾಜಕೀಯದಲ್ಲಿ ಗಣನೀಯ ಶಕ್ತಿಯಾಗಿ ಬೆಳೆಯ

ಇ. ಎಂ. ಎಸ್. ನಂಬೂದಿರಿಪಾದ್

ಬಹುದು ಎಂದು ತಿಳಿದವು. ಇಂತಹ ಪರಿಸ್ಥಿತಿಯಿಂದ ಇವು ಹೆಚ್ಚು ಹೆಚ್ಚು ಆಕ್ರಮಣಕಾರಿಯಾಗಿ ಜಾತಿ ಮತ್ತು ಕೋಮುವಾದಿ ಬೇಡಿಕೆಗಳನ್ನು ಮುಂದಿಡತೊಡಗಿದವು. ಒಂದಲ್ಲ ಒಂದು ರಾಜಕೀಯ ಮೈತ್ರಿಕೂಟದಲ್ಲಿ ಈ ಬೇಡಿಕೆಗಳನ್ನು ಈಡೇರಿಸಕೊಳ್ಳ ಬಹುದೆಂದು, ಇವು ಅಂದುಕೊಂಡಿದ್ದವು ಕಾಂಗ್ರೆಸ್ ಇಂತಹ ಹಲವು ಬೇಡಿಕೆಗಳನ್ನು ಈಡೇರಿಸಿದ್ದು ಮಾತ್ರವಲ್ಲದೆ, ಇಂದಿಗೂ ಈಡೇರಿಸಲು ತಯಾರಾಗಿದೆ. ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಮಹಿಳೆಯರ ಹಕ್ಕುಗಳ ವಿಷಯದಲ್ಲಿ ಮುಸ್ಲಿಂ ಮತಾಂಧರನ್ನು ಮತ್ತು ಮೂಲಭೂತವಾದಿಗಳನ್ನು ಸುಪ್ರೀತಗೊಳಿಸಲು ಸಿದ್ಧರಿರುವುದು ಇದಕ್ಕೆ ಇತ್ತೀಚಿನ ಉದಾಹರಣೆ. ಇದಕ್ಕೆ ಪ್ರತಿಯಾಗಿ ಸಿ ಪಿ ಐ. [ಎಂ] ಈ ವಿಷಯದಲ್ಲಿ ದೃಢ ನಿಲುವು ತೆಗೆದುಕೊಂಡಿದೆ ಇದರಿಂದಾಗಿ ಅಖಿಲ ಭಾರತ ಮುಸ್ಲಿಂ ಲೀಗ್ ಎಡ ಪ್ರಜಾಪ್ರಭುತ್ವ ರಂಗದಿಂದ ನಿರ್ಗಮಿಸಿತು

ಮುಸ್ಲಿಂ ಲೀಗ್ ಜತೆ 1967 ರಲ್ಲಿ ಮತ್ತು ಅಖಿಲ ಭಾರತ ಮುಸ್ಲಿಂ ಲೀಗ್ ಜತೆ 1974 ರ ಮೈತ್ರಿಕೂಟದ ವಸ್ತು ಸ್ಥಿತಿಗೂ, ಇಂದು ಅಖಿಲ ಭಾರತ ಮುಸ್ಲಿಂ ಲೀಗ್ ಜತೆ ಮೈತ್ರಿಯನ್ನು ಮುಂದುವರಿಸುವ ಪ್ರಶ್ನೆಗೂ ಪೂರ್ಣ ವ್ಯತ್ಯಾಸವಿದೆ. ಅಧಿಕಾರದಲ್ಲಿ ಕಾಂಗ್ರೆಸ್‌ನ ಏಕಸ್ವಾಮ್ಯವನ್ನು ಮುರಿಯುವ ಹೋರಾಟದಲ್ಲಿ ಎರಡು ವಿರೋಧಪಕ್ಷಗಳು ಕೈ ಜೋಡಿಸಿದ್ದು ಹಿಂದಿನ ಮೈತ್ರಿಗಳ ಸಂದರ್ಭ. ಈ ಹೋರಾಟ ಭಾಗಶಃ ವಿಜಯಶಾಲಿಯಾಗಿದೆ ಎಂದು ಹೇಳಬೇಕು ಇಂದು ಕಾಂಗ್ರೆಸ್ ಹಲವು ರಾಜ್ಯಗಳಲ್ಲಿ ಜಾತಿ ಕೋಮುವಾದಿ ಪಕ್ಷಗಳ ಮೈತ್ರಿ ಇಲ್ಲದೆ ಅಧಿಕಾರದ ಗದ್ದುಗೆಯನ್ನು ಅಶಿಕಲಾಗದ ಪರಿಸ್ಥಿತಿಯಿದೆ.

ಕಾಂಗ್ರೆಸ್ ಮತ್ತು ಜಾತಿ,ಕೋಮುವಾದಿ ಪಕ್ಷಗಳು ಇಂದು ಪರಸ್ಪರಹೆಚ್ಚು ಹೆಚ್ಚಾಗಿ ಅವಲಂಬಿಸಿವೆ. ಆದ್ದರಿಂದ ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೂ, ಈ ವಿಚ್ಛಿದ್ರಕಾರಿ ಶಕ್ತಿಗಳವಿರುದ್ಧ ಹೋರಾಟಕ್ಕೂ ನಿಕಟ ಸಂಬಂಧವಿದೆ. ಕೇರಳದಲ್ಲಿ ಹಿಂದೆ ಅನುಸರಿಸಿದ ಕಾರ್ಯತಂತ್ರವನ್ನು ಮುಂದುವರಿಸಿದ್ದೇ ಆದರೆ ಇಂದಿಗೂ ಮುಖ್ಯ ಕರ್ತವ್ಯವಾಗಿರುವ ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ವಿನಾಶಕರವಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಎಡ ಮತ್ತು ಜಾತ್ಯಾತೀತ ಶಕ್ತಿಗಳು ಜಾತಿ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಜೊತೆಗೂಡದೆ ಸ್ವತಂತ್ರವಾಗಿ, ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ಹೋರಾಟವನ್ನು ಮುಂದುವರಿಸಬೇಕಾಗಿದೆ.

ವಿಜಯವಾಡ ಅಧಿವೇಶನದಲ್ಲೇ ಈ ಸ್ಪಷ್ಟ ನಿಲುವನ್ನು ಪಕ್ಷ ಅಂಗೀಕರಿಸಿದ್ದರೂ, ಅದರ ಸಂಪೂರ್ಣ ಅರ್ಥ ಮನದಟ್ಟಾದಂತಿಲ್ಲ, ಆ ಕಾರಣದಿಂದಲೇ ಕೇರಳದಲ್ಲಿ, ಈ ನಿಲುವಿಗೆ ತಕ್ಕಂತೆ ಕಾರ್ಯ ತಂತ್ರದಲ್ಲಿ ಬದಲಾವಣೆ ಮಾಡಲಿಲ್ಲ, ಕೇಂದ್ರ ಸಮಿತಿ ಮತ್ತು ಪಾಲಿಟ್‌ಬ್ಯೂರೋ ಈ ದಿಕ್ಕಿನಲ್ಲಿ ಗಂಭೀರ ಪ್ರಯತ್ನಗಳನ್ನು ಮಾಡಿದೆ. 1982ರ ಮೇ ಚುನಾವಣೆಗಳ ನಂತರ ರಾಜ್ಯ ಸಮಿತಿ ಸಭೆಯಿಂದ ಆರಂಭಿಸಿ, ಪಾಲಿಟ್‌ಬ್ಯೂರೋ "ಏನಾದರೂ ಮಾಡಿ ಕರುಣಾಕರನ್ ಸರ್ಕಾರವನ್ನು ಉರುಳಿಸುವ" ಚುನಾವಣಾ-ಕಾರ್ಯತಂತ್ರದ ನಿಲುವಿನಿಂದ ದೂರವಿರಲು ರಾಜ್ಯಸಮಿತಿಗೆ ಸಲಹೆ ಇತ್ತಿತ್ತು. ಅಂದರೆ ಆಳುವ ಪಕ್ಷಗಳಿಂದ ಪಕ್ಷಾಂತರ ನಡೆಸಿ ಸರ್ಕಾರವನ್ನು ಉರುಳಿಸಿ ಬದಲಿ ಸರ್ಕಾರ ರಚಿಸುವ ಸಂದರ್ಭ ಸಾಧಕ ಕಾರ್ಯತಂತ್ರ ಬಳಸಬಾರದೆಂಬುದು ಪಾಲಿಟ್‌ಬ್ಯೂರೋದ ಸಲಹೆಯಾಗಿತ್ತು ಈ ನಿಲುವನ್ನು ರಾಜ್ಯ ಸಮಿತಿ ಬಹುಮತದಿಂದ ಒಪ್ಪಿಕೊಂಡಿದ್ದರೂ, ಅಲ್ಪ ಸಂಖ್ಯೆಯ ಕೆಲವು ಸದಸ್ಯರು ಈ ನಿಲುವನ್ನು ಅನೂಚಾನವಾಗಿ ವಿರೋಧಿಸುತ್ತಾ ಬಂದಿದ್ದಾರೆ. ರಾಜ್ಯ ಸಮಿತಿ ಮತ್ತು ಸೆಕ್ರೆಟೇರಿಯಟ್ ಎರಡರಲ್ಲೂ ಅಲ್ಪ ಸಂಖ್ಯಾತವಾದ ಈ ಗುಂಪು ನವಂಬರ್ 85ರಲ್ಲಿ ಕೊಚ್ಚಿನ್‌ನಲ್ಲಿ ನಡೆದ ರಾಜ್ಯ ಸಮ್ಮೇಳನದ ಚುನಾವಣೆ ಹಿಡಿದ ಮಾರ್ಗವನ್ನು ತಿರುಚಲು ಪ್ರಯತ್ನಿಸಿತು.

ಭಿನ್ನಮತದ ಹಕ್ಕು ಹಾಗೂ ಗುಂಪುಗಾರಿಕೆ

ರಾಜ್ಯ ಸಮಿತಿ ಮತ್ತು ಸೆಕ್ರೆಟೇರಿಯಟ್ ಸದಸ್ಯರೂ ಸೇರಿದಂತೆ ಪ್ರತಿಯೊಬ್ಬ ಪಕ್ಷದ ಸದಸ್ಯರಿಗೂ ತನ್ನ ಘಟಕದಲ್ಲಿ ಭಿನ್ನಮತ ವ್ಯಕ್ತಪಡಿಸುವ ಹಕ್ಕಿದೆ. ಈ ಪಕ್ಷದ ಆಂತರಿಕ ಪ್ರಜಾಸತ್ತೆಯ ನೀತಿಗೆ ಅನುಗುಣವಾಗಿಯೇ ಸೆಕ್ರೆಟೇರಿಯಟ್ ಸದಸ್ಯ ಎಂ. ವಿ. ರಾಘವನ್ ರಾಜ್ಯ ಅಧಿವೇಶದಲ್ಲಿ ಭಿನ್ನಮತ ವ್ಯಕ್ತಪಡಿಸಲು ಅನುಮತಿ ಕೋರಿದಾಗ, ಹಾಜರಿದ್ದ ಪೋಲಿಟ್‌ಬ್ಯೂರೋದ ಸದಸ್ಯರು ಇದು ಅವರ ಹಕ್ಕೆಂದು ತಿಳಿಸಿದರು. ಸೆಕ್ರೆಟೇರಿಯಟ್ ಮತ್ತು ರಾಜ್ಯ ಸಮಿತಿಯೇ ಸಾಮಾನ್ಯವಾಗಿ ರಾಘವನ್‌ರ ಘಟಕವಾದರೂ, ಅಧಿವೇಶನ ಸೇರಿದಾಗ ಅದೇ ಅವರ ಘಟಕವಾಗುತ್ತದೆ.

ಆದರೆ ರಾಘವನ್ ಬದಲಿ ದಸ್ತಾವೇಜನ್ನು ತಯಾರಿಸಿ ಎಂಟು ರಾಜ್ಯ ಸಮಿತಿಯ ಸದಸ್ಯರ ಸಹಿ ಸಂಗ್ರಹಿಸುವ ಮೂಲಕ ಗುಂಪುಗಾರಿಕೆ ಆರಂಭಿಸಿದರು. ಇನ್ನೊಬ್ಬ ರಾಜ್ಯಸಮಿತಿ ಸದಸ್ಯರ ಸಹಾಯದಿಂದ ಈ ದಸ್ತಾವೇಜುಗಳ ಹಲವು ಪ್ರತಿಗಳನ್ನು ಮಾಡಿದರು (ಸುಮಾರು 170 ಪ್ರತಿಗಳನ್ನು ಮಾಡಲಾಯಿತು). ಈ ಬದಲಿ ದಸ್ತಾವೇಜಿನ ಆಧಾರದ ಮೇಲೆ ರಾಜ್ಯ ಅಧಿವೇಶನದಲ್ಲಿ ಪ್ರತಿನಿಧಿಗಳ ಒಂದು ದೊಡ್ಡ ಸಂಖ್ಯೆ ಬದಲಿ ದಸ್ತಾವೇಜನ್ನು ಬೆಂಬಲಿಸಿ ಮಾತನಾಡುವಂತೆ ಮಾಡಲಾಯಿತು.

ಪಕ್ಷದ ಅಧಿವೇಶನಕ್ಕೆ ಕೇಂದ್ರ ಸಮಿತಿ ರಾಜ್ಯದಲ್ಲಿ ಈ ಬೆಳವಣಿಗೆಗಳ ಬಗ್ಗೆ ವಿಶದವಾಗಿ ವರದಿ ಮಾಡಿದ್ದು, ಅದು ರಾಘವನ್ ಮತ್ತು ಅವರ ಸಹಚರರು ಪಾರ್ಲಿಮೆಂಟರಿ ಸಂದರ್ಭಸಾಧಕ ರಾಜಕೀಯ ತಪ್ಪನ್ನೂ, ಇದಕ್ಕಾಗಿ ರಾಜ್ಯ ಸಮಿತಿ ಮತ್ತು ರಾಜ್ಯ ಸಮ್ಮೇಳನದಲ್ಲಿ ಗುಂಪುಗಾರಿಕೆ ನಡೆಸಿದ ತಪ್ಪನ್ನು ಮಾಡಿದ್ದಾರೆ ಎಂಬ ಸರ್ವಾನುಮತ ನಿರ್ಣಯಕ್ಕೆ ಬಂತು. ಅಧಿವೇಶನ ಪಾರ್ಲಿಮೆಂಟರಿ ಸಂದರ್ಭಸಾಧಕ ರಾಜಕೀಯ ತಪ್ಪನ್ನು ಸರಿಪಡಿಸಲು ಮತ್ತು ಗುಂಪುಗಾರಿಕೆಯನ್ನು ಬುಡಸಮೇತ ಕಿತ್ತೊಗೆಯಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ಸಮಿತಿಗೆ ಅಧಿಕಾರ ನೀಡಿತು. ಕೈಗೊಳ್ಳಬೇಕಾದ ಕ್ರಮಗಳು ರಾಜಕೀಯ ಮತ್ತು ಸಂಘಟನಾತ್ಮಕ ಎರಡೂ ರೀತಿಯದಾಗಿರಬೇಕು. ಪಕ್ಷದಲ್ಲಿ ಮತ್ತು ಅದರ ಪ್ರಭಾವದಲ್ಲಿರುವ ಜನಸಮುದಾಯದಲ್ಲಿ ದೊಡ್ಡ ಪ್ರಮಾಣದ ರಾಜಕೀಯ ಪ್ರಚಾರ ನಡೆಸದೆ ಪಾರ್ಲಿಮೆಂಟರಿ ಸಂದರ್ಭ ಸಾಧಕತನದ

(8ನೇ ಪುಟ ನೋಡಿ)

ಪಕ್ಷದ ಸಂವಿಧಾನದಲ್ಲಿ ಅಂತರಿಕ ಚರ್ಚೆಯ ವಿಧಾನಗಳು

ಕಾಲದ ಪರೀಕ್ಷೆಯನ್ನು ಗೆದ್ದು ನಿಂತಿರುವ ಮಾರ್ಕ್ಸ್‌ವಾದಿ - ಲೆನಿನ್‌ವಾದಿ ಸಂಘಟನೆಯ ತತ್ವಗಳ ಆಧಾರದ ಮೇಲೆ ಭಾರತೀಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷ ಪಕ್ಷದ ಅಂತರಿಕ ಚರ್ಚೆಗೆ ಮೂರು ನಿಯಮಗಳನ್ನು ವಿಧಾಯಕ ಮಾಡಿದೆ.

1) ಪ್ರತಿ ಸಭೆಯಲ್ಲಿಯೂ "ಪಕ್ಷದ ಘಟಕದ ಒಳಗೆ ಬಿಚ್ಚು ಮನಸ್ಸಿನ ಮುಕ್ತ ಚರ್ಚೆ". ಚರ್ಚೆಯ ಮುಕ್ತಾಯದ ನಂತರ ಅಲ್ಪ ಸಂಖ್ಯಾತರು ಬಹುಸಂಖ್ಯಾತ ಅಭಿಪ್ರಾಯಕ್ಕೆ ತಲೆಬಾಗಬೇಕು

2) ಅಂತರಿಕ ಚರ್ಚೆಗಳ ಬಗ್ಗೆ ಕಲಂ XXI ಹೀಗೆ ಹೇಳುತ್ತದೆ."ಪಕ್ಷದ ಕಾರ್ಯಕ್ಷಮತೆ ಹಾಗೂ ನಿರ್ಧಾರಕ ಶಕ್ತಿಗೆ ಮಾರಕವಾಗುವ, ಪಕ್ಷದ ನೀತಿಗಳ ಬಗ್ಗೆ ಮುಗಿಯಲಾರದ ಚರ್ಚೆ, ಪಕ್ಷದ ಅಂತರಿಕ ಪ್ರಜಾಸತ್ತೆಯ ಸಂಪೂರ್ಣ ದುರುಪಯೋಗ". ಆದ್ದರಿಂದಲೇ "ಕೇಂದ್ರ ಸಮಿತಿ (ಅ) ತನಗೆ ಅಗತ್ಯವೆನಿಸಿದಾಗ, (ಆ) ಪಕ್ಷದ ನೀತಿಯ ಯಾವುದೇ ಪ್ರಮುಖ ಸಮಸ್ಯೆಯ ಬಗ್ಗೆ ಕೇಂದ್ರ ಸಮಿತಿಯಲ್ಲಿ ದೃಢ ಬಹುಮತ ಕಂಡುಬಾರದಿದ್ದಾಗ, (ಇ) ಪಕ್ಷದ ಒಟ್ಟು ಸದಸ್ಯತ್ವದ ಮೂರನೇ ಒಂದು ಭಾಗವನ್ನು ಪ್ರತಿನಿಧಿಸುವ ರಾಜ್ಯ ಸಮಿತಿಗಳು ಇಂತಹ ಚರ್ಚೆಗೆ ಬೇಡಿಕೆ ಮುಂದಿಟ್ಟಾಗ, ಅಖಿಲ ಭಾರತೀಯ ಮಟ್ಟದಲ್ಲಿ ಅಂತರಿಕ ಚರ್ಚೆಯನ್ನು ಏರ್ಪಡಿಸಬೇಕು" ಎಂಬ ಅವಕಾಶ ಮಾಡಿಕೊಡಲಾಗಿದೆ. ಇದೇ ಸಂದರ್ಭದಲ್ಲಿ ಮುಂದುವರಿದು ಪಕ್ಷದ ಸಂವಿಧಾನ "ರಾಜ್ಯ ಸಮಿತಿ ಆ ರಾಜ್ಯಕ್ಕೆ ಸಂಬಂಧಪಟ್ಟ ಮುಖ್ಯ ನೀತಿಯ ಸಮಸ್ಯೆಯ ಬಗ್ಗೆ ಸ್ವಂತ ಇಚ್ಛೆಯಿಂದ, ರಾಜ್ಯದ ಮೂರನೇ ಒಂದು ಭಾಗದ ಸದಸ್ಯತ್ವ ಪ್ರತಿನಿಧಿಸುವ ಜಿಲ್ಲಾ ಸಮಿತಿಗಳ ಬೇಡಿಕೆಯ ಮೇರೆಗೆ – ಕೇಂದ್ರ ಸಮಿತಿಯ ಅನುಮತಿ ಪಡೆದು ಚರ್ಚೆ ಏರ್ಪಡಿಸಬಹುದು" ಎಂಬ ಅವಕಾಶ ಮಾಡಿಕೊಡಲಾಗಿದೆ.

3) ಪಕ್ಷದ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ಸಮಿತಿ ಸಿದ್ಧಪಡಿಸಿದ ಕರಡಿನ ಮೇಲೆ ಎರಡು ತಿಂಗಳುಗಳ ಕಾಲ ಪಕ್ಷದ ಎಲ್ಲಾ ಹಂತದ ಘಟಕಗಳಲ್ಲಿ ಚರ್ಚೆ.

21 ನೇ ಶತಮಾನದ ವೇಳೆಗೆ ಅಣ್ವಸ್ತ್ರರಹಿತ ವಿಶ್ವವನ್ನು ಸಾಧಿಸೋಣ - ಗೋರ್ಬಾಚೆವ್

ಇಲ್ಲಿ ನಾವು ಸೋವಿಯೆತ್ ಒಕ್ಕೂಟ ಪರಮಾಣು ನಿಶ್ಶಸ್ತ್ರೀಕರಣ ಹಾಗೂ ಜಾಗತಿಕ ಶಾಂತಿಗಾಗಿ ನೀಡಿದ ಸಮಂಜಸ ಹಾಗೂ ವಾಸ್ತವಿಕ ಪ್ರಸ್ತಾಪಗಳನ್ನು ಹಂತ ಹಂತವಾಗಿ ಪರಮಾಣು ನಿಶ್ಶಸ್ತ್ರೀಕರಣಕ್ಕಾಗಿ, ಪರಮಾಣು ಅಸ್ತ್ರಗಳ ಮತ್ತು ತಾಪ-ಪರಮಾಣು ವಿನಾಶದ ಬೆದರಿಕೆಯ ಸಂಪೂರ್ಣ ನಿರ್ಮೂಲನಕ್ಕಾಗಿ ಸೋವಿಯೆತ್ ಪ್ರಸ್ತಾಪಗಳು ಎಷ್ಟು ಕಳಕಳಿಯಿಂದ, ಪ್ರಾಮಾಣಿಕತೆಯಿಂದ, ಗಂಭೀರತೆಯಿಂದ ಕೂಡಿವೆ ಹಾಗೂ ವಾಸ್ತವವಾಗಿವೆ ಎಂಬುದು ನಮ್ಮ ಓದುಗರಿಗೆ ಮನವರಿಕೆಯಾಗಲೆಂದು ಕೊಟ್ಟಿದ್ದೇವೆ.

ಹೊಸ ವರ್ಷವಾದ 1986 ಆರಂಭವಾಗಿದೆ. ಇದು ಮಹತ್ವಪೂರ್ಣವಾದ ಒಂದು ವರ್ಷವಾಗುವುದು —ಸೋವಿಯೆತ್ ರಾಜ್ಯದ ಇತಿಹಾಸದಲ್ಲಿ ನಿರ್ಧಾರಕವಾದ ಒಂದು ಬದಲಾವಣೆಯಾಗುವ ವರ್ಷವಾಗುವುದೆಂದೂ ಹೇಳಬಹುದು- ಸೋವಿಯೆತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ 27ನೆಯ ಮಹಾಧಿವೇಶನದ ವರ್ಷವಾಗುವುದು.

ಅಂತರರಾಷ್ಟ್ರೀಯ ಶಾಂತಿ ವರ್ಷದ ಕೊಡುಗೆ

ನಮ್ಮ ಅತ್ಯಂತ ಮುಖ್ಯವಾದ ಕಾರ್ಯಕ್ರಮವು ಜಗತ್ತಿನ್ಯಾಂತ ನಿಷ್ಕೃಷ್ಟವಾಗಿ ಗೊತ್ತುಮಾಡಲಾದ ಒಂದು ಅವಧಿಯೊಳಗೆ ಅಣ್ವಸ್ತ್ರಗಳ ಸಂಪೂರ್ಣ ನಿರ್ಮೂಲನವಾಗುವಂತೆ ಮಾಡುವ ಉದ್ದೇಶದಿಂದ ಕೂಡಿದ ಒಂದು ನಿರ್ದಿಷ್ಟ ಕಾರ್ಯಕ್ರಮವಾಗಿದೆ

ಬರುವ 15 ವರ್ಷಗಳೊಳಗೆ, ಈ ಶತಮಾನದ ಕೊನೆಯ ಹೊತ್ತಿಗೆ, ಭೂಮಂಡಲವು ಅಣ್ವಸ್ತ್ರಗಳಿಂದ ಮುಕ್ತವಾಗುವಂತೆ ಮಾಡುವ ನಿಟ್ಟಿನ ಹಂತಹಂತವಾದ ಮತ್ತು ಸುಸಂಗತವಾದ ಒಂದು ಪ್ರಸ್ತಾವವನ್ನು ಸೋವಿಯತ್ ಒಕ್ಕೂಟ ಮುಂದಿಡುತ್ತದೆ.

ಅಣುಯುದ್ಧ ವಿಪತ್ತಿನ ಭೀತಿಯಿಂದ ಮಾನವಕೋಟಿ ಮುಕ್ತವಾಗುವಂತೆ ಮಾಡುವುದಕ್ಕೋಸ್ಕರ ಕಾರ್ಯಕ್ರಮವನ್ನು 1986ರ ಆರಂಭದಿಂದಲೇ ಕಾರ್ಯರೂಪಕ್ಕೆ ತರಬೇಕೆಂಬುದು ನಮ್ಮ ಅಭಿಪ್ರಾಯ ವಿಶ್ವಸಂಸ್ಥೆಯು ಈ ವರ್ಷವನ್ನು ಅಂತರರಾಷ್ಟ್ರೀಯ ಶಾಂತಿ ವರ್ಷವೆಂದು ಉದ್ಘೋಷಿಸಿರುವುದರಿಂದಾಗಿ ಇದಕ್ಕೆ ಇನ್ನಷ್ಟು ರಾಜಕೀಯ ಹಾಗೂ ನೈತಿಕ ಪ್ರೇರಣೆ ದೊರಕುತ್ತದೆ.

ಅಣ್ವಸ್ತ್ರಗಳ ಉತ್ಪಾದನೆಯನ್ನೂ ಬಳಕೆಯನ್ನೂ ನಿಷೇಧಿಸುವ ಮತ್ತು ಮಾನವ ಕೋಟಿಯು ಹಿತಕ್ಕೋಸ್ಕರ ಶಾಂತಿಶೀಲ ಉದ್ದೇಶಗಳಿಗಾಗಿ ಪರಮಾಣು ಶಕ್ತಿಯನ್ನು ಬಳಸಿಕೊಳ್ಳುವ ಪ್ರಶ್ನೆಯನ್ನು ಮೊತ್ತ ಮೊದಲು, 1946ರಷ್ಟು ಹಿಂದೆಯೇ ಮುಂದಿಟ್ಟದ್ದು, ನಮ್ಮ ದೇಶ.

ಈಗ ಅಣ್ವಸ್ತ್ರಗಳನ್ನು -ಅಸ್ತ್ರ ವಾಹಕಗಳನ್ನೂ ಸಿಡಿತಲೆಗಳನ್ನೂ- ಕಡಿಮೆ ಮಾಡುವ ಮತ್ತು ಮುಂದೆ ಅವುಗಳನ್ನು ಪೂರ್ತಿ ನಿರ್ಮೂಲ ಮಾಡುವ ನಿಟ್ಟಿನಲ್ಲಿ ಕಾರ್ಯ ಸಾಧ್ಯ ಸೂಚನೆಗಳೇನು ?

ಮೊದಲ ಹಂತ : 1986 ರಿಂದ

ಮುಂದಿನ 5-8 ವರ್ಷಗಳ ಅವಧಿಯಲ್ಲಿ ಸೋವಿಯತ್ ಒಕ್ಕೂಟ ಮತ್ತು ಸಂ. ರಾ ಅಮೇರಿಕ, ಸೋವಿಯತ್ ಒಕ್ಕೂಟದಿಂದ ಸಂ ರಾ.ಅಮೇರಿಕವನ್ನು ಮತ್ತು ಸಂ. ರಾ. ಅಮೇರಿಕದಿಂದ ಸೋವಿಯತ್ ಒಕ್ಕೂಟವನ್ನು ತಲುಪಬಲ್ಲ ನ್ಯೂಕ್ಲಿಯರ್ ಯುದ್ಧ ಸಾಧನಗಳನ್ನು ಅರ್ಧದಷ್ಟು ಕಡಿಮೆ ಮಾಡುವುದು. ಈ ಬಗೆಯ ಉಳಿದ ಅಸ್ತ್ರವಾಹಕಗಳಿಗೆ ಸಂಬಂಧಪಟ್ಟಂತೆ, ಪ್ರತಿಯೊಂದು ಪಕ್ಷದ ಬಳಿ 6,000 ಸಿಡಿತಲೆಗಳಿಗಿಂತ ಹೆಚ್ಚಿರಬಾರದು.

ಅಣು ಯುದ್ಧ ಸಾಧನಗಳನ್ನು ರೂಪಿಸುವುದನ್ನೂ ಪರೀಕ್ಷಾರ್ಥ ಪ್ರಯೋಗಿಸುವುದನ್ನೂ, ನಿಯೋಜಿಸುವುದನ್ನೂ ಸೋವಿಯತ್ ಒಕ್ಕೂಟ ಮತ್ತು ಸಂ ರಾ. ಅಮೆರಿಕ ಪರಸ್ಪರ ವರ್ಜಿಸಿದರೆ ಮಾತ್ರವೇ ಈ ರೀತಿಯ ಕಡಿತ ಸಾಧ್ಯ. ಸೋವಿಯತ್ ಒಕ್ಕೂಟ ಮೇಲಿಂದ ಮೇಲೆ ಎಚ್ಚರಿಕೆ ಕೊಟ್ಟಿರುವಂತೆ, ಅಂತರಿಕ್ಷ ಯುದ್ಧಾಸ್ತ್ರಗಳನ್ನು ಸೃಷ್ಟಿಸುವುದರಿಂದ ಭೂಮಿಯ ಮೇಲೆ ಅಣ್ವಸ್ತ್ರಗಳನ್ನು ಕಡಿಮೆಮಾಡುವ ಪರೀಕ್ಷೆಗಳೆಲ್ಲ ಭಂಗವಾಗುವುವು.

ಮೊದಲನೆಯ ಹಂತದಲ್ಲಿ, ಯೂರೋಪ್ ಖಂಡವು ಅಣ್ವಸ್ತ್ರಗಳಿಂದ ಮುಕ್ತವಾಗುವಂತೆ ಮಾಡುವ ನಿಟ್ಟಿನ ಮೊದಲ ಹೆಜ್ಜೆಯಾಗಿ, ಯೂರೋಪ್ ವಲಯದಲ್ಲಿ ಸೋವಿಯೆತ್ ಒಕ್ಕೂಟದ ಹಾಗೂ ಸಂ ರಾ ಅಮೆರಿಕದ ಮಧ್ಯಮ-ಶ್ರೇಣಿ ಕ್ಷಿಪಣಿಗಳನ್ನು-ಬ್ಯಾಲಿಸ್ಟಿಕ್ ಹಾಗೂ ಕ್ರೂಸ್ ಕ್ಷಿಪಣಿಗಳನ್ನು ಪೂರ್ತಿ ತೆಗೆದು ಹಾಕುವ ಕುರಿತಾಗಿ ಒಂದು ತೀರ್ಮಾನವನ್ನು ಕೈಗೊಂಡು ಕಾರ್ಯರೂಪಕ್ಕೆ ತರಬೇಕಾಗಿದೆ.

ಎರಡನೆಯ ಹಂತ : 1990 ರಿಂದ

1990ರ ವೇಳೆಗೆ ಆರಂಭವಾಗಬೇಕಾದ ಮತ್ತು 5-7 ವರ್ಷಗಳ ಅವಧಿಗೆ ವ್ಯಾಪಿಸಬೇಕಾದ ಈ ಹಂತದಲ್ಲಿ ಅಣ್ವಸ್ತ್ರಗಳನ್ನು ಹೊಂದಿರುವ ಇತರ ರಾಷ್ಟ್ರಗಳು ಅಣು ನಿಶ್ಶಸ್ತ್ರೀಕರಣ ಕಾರ್ಯದಲ್ಲಿ ತೊಡಗಬೇಕು ಮೊದಲನೆಯದಾಗಿ ಅವು ತಮ್ಮ ಎಲ್ಲ ಅಣು ಯುದ್ಧ ಸಾಧನ ಸಂಚಯಗಳನ್ನು ಸ್ತಂಭನಗೊಳಿಸಲು ಮತ್ತು ಇತರ ದೇಶಗಳ ಪ್ರದೇಶಗಳಲ್ಲಿ ಅವುಗಳನ್ನು ಇರಿಸದಿರಲು ವಾಗ್ದಾನ ಮಾಡಬೇಕು.

ಸೋವಿಯೆತ್ ಒಕ್ಕೂಟ ಮತ್ತು ಸಂ.ರಾ ಅಮೆರಿಕ ತಮ್ಮ ತಮ್ಮ ಅಣು ಯುದ್ಧ ಸಾಧನ ಸಂಚಯಗಳನ್ನು ಶೇಕಡಾ 50ರಷ್ಟು ಕಡಿಮೆ ಮಾಡುವುದನ್ನು ಪೂರ್ತಿಗೊಳಿಸಿದ ತರುವಾಯ, ಎರಡನೆಯ ಹಂತದಲ್ಲಿ ಇನ್ನೊಂದು ಮುಖ್ಯವಾದ ಹೆಜ್ಜೆಯನ್ನು ಇರಿಸಲಾಗುವುದು ಅಣ್ವಸ್ತ್ರಗಳನ್ನು ಹೊಂದಿರುವ ಎಲ್ಲ ರಾಷ್ಟ್ರಗಳು ತಮ್ಮ ಅಣು ಯುದ್ಧ ಸಾಧನಗಳನ್ನು, ಅರ್ಥಾತ್ 1,000 ಕಿಲೋಮೀಟರುಗಳಷ್ಟು ದೂರದ ಶ್ರೇಣಿಯ ಅಸ್ತ್ರಗಳನ್ನು ತೆಗೆದು ಹಾಕುವುದು.

ಅದೇ ಹಂತದಲ್ಲಿ ಅಂತರಿಕ್ಷ ಯುದ್ಧಾಸ್ತ್ರಗಳನ್ನು ನಿಷೇಧಿಸುವ ಕುರಿತಾದ ಸೋವಿಯೆತ್ ಅಮೇರಿಕನ್ ಒಡಂಬಡಿಕೆಯು, ಪ್ರಮುಖ ಕೈಗಾರಿಕಾ ರಾಷ್ಟ್ರಗಳು ಕಡ್ಡಾಯವಾಗಿ ಭಾಗಿಗಳಾಗುವ ಬಹುಪಕ್ಷೀಯ ಒಡಂಬಡಿಕೆಯಾಗುವುದು

ಅಣ್ವಸ್ತ್ರಗಳನ್ನು ಹೊಂದಿರುವ ಎಲ್ಲ ರಾಷ್ಟ್ರಗಳು ಅಣ್ವಸ್ತ್ರ ಪರೀಕ್ಷಾ ಪ್ರಯೋಗಗಳನ್ನು ನಿಲ್ಲಿಸುವುದು.

ಮೂರನೆಯ ಹಂತ : 1995 ರಿಂದ

ಇದು 1995ರೊಳಗೆ ಆರಂಭವಾಗುವುದು ಈ ಹಂತದಲ್ಲಿ ಉಳಿದೆಲ್ಲ ನ್ಯೂಕ್ಲಿಯರ್ ಅಸ್ತ್ರಗಳನ್ನು ತೆಗೆದು ಹಾಕುವ ಕಾರ್ಯವನ್ನು ಪೂರ್ತಿಗೊಳಿಸುವುದು 1999ರ ಕೊನೆಯ ಹೊತ್ತಿಗೆ, ಭೂಮಿಯ ಮೇಲೆ ಅಣ್ವಸ್ತ್ರಗಳು ಇರಬಾರದು. ಅಂಥ ಅಸ್ತ್ರಗಳು ಮತ್ತೊಂದೂ ಕಾಣಿಸಿಕೊಳ್ಳದಂತೆ ಮಾಡುವ ಒಂದು ಸಾರ್ವತ್ರಿಕ ಒಪ್ಪಂದವನ್ನು ಏರ್ಪಡಿಸುವುದು.

ಅಣ್ವಸ್ತ್ರಗಳನ್ನು ನಾಶಮಾಡುವ ಮತ್ತು ಅಂಗಭಾಗಗಳನ್ನು ತೆಗೆದು ಹಾಕುವ ಅಥವಾ ಅಸ್ತ್ರವಾಹಕಗಳನ್ನು ನಾಶಮಾಡುವ ಹಲವಾದ ವಿಶೇಷ ಕಾರ್ಯವಿಧಾನಗಳನ್ನು ಗೊತ್ತುಮಾಡಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ತನ್ಮಧ್ಯೆ ಪ್ರತಿಯೊಂದು ಹಂತದಲ್ಲಿ ನಾಶಮಾಡಬೇಕಾದ ಅಸ್ತ್ರಗಳ ಸಂಖ್ಯೆ, ಅವುಗಳನ್ನು ನಾಶಮಾಡಬೇಕಾದ ಸ್ಥಳಗಳು ಮುಂತಾದ ವಿಷಯಗಳನ್ನು ಕುರಿತಂತೆ ಒಪ್ಪಂದಕ್ಕೆ ಬರುವುದು.

ಅಸ್ತ್ರಗಳನ್ನು ನಾಶಮಾಡಿದ ಅಥವಾ ಅಸ್ತ್ರಗಳ ಮಿತಿ ನಿರ್ಧಾರಣದ ಸಂಬಂಧವಾದ ಪರಿಶೀಲನೆಯನ್ನು ರಾಷ್ಟ್ರೀಯ ತಾಂತ್ರಿಕ ಸಾಧನೆಗಳ ಮೂಲಕವೂ ಸ್ಥಳದಲ್ಲೇ ಪರೀಕ್ಷಣೆಗಳ ಮೂಲಕವೂ ನಡೆಸುವುದು. ಇತರ ಯಾವುದೇ ಅಧಿಕ ಪರಿಶೀಲನಾ ಕ್ರಮಗಳನ್ನು ಕುರಿತಂತೆ ಒಪ್ಪಂದಕ್ಕೆ ಬರಲು ಸೋವಿಯೆತ್ ಒಕ್ಕೂಟ ತಯಾರಿದೆ

ಹೊಸದಾದ ಹಾಗೂ ಅತ್ಯಂತ ಅಪಾಯಕರವಾದ ಅಂತರಿಕ್ಷ ಅಸ್ತ್ರಗಳನ್ನು ಸೃಷ್ಟಿಸಲು ಮುಂದಿನ 10-15 ವರ್ಷಗಳನ್ನು ಹಾಳು ಮಾಡುವ ಬದಲು, ಅಣು ಶಸ್ತ್ರಾಸ್ತ್ರಗಳನ್ನು ನಿರ್ಮೂಲ ಮಾಡತೊಡಗುವುದು ಮತ್ತು ಕೊನೆಯದಾಗಿ ಅವುಗಳನ್ನು ಎಂದೆಂದಿಗೂ ಕೊನೆಗೊಳಿಸುವುದು ಹೆಚ್ಚು ವಿವೇಕಯುತವಾದ ಮಾರ್ಗವಲ್ಲವೆ ? ಸೋವಿಯೆತ್ ಒಕ್ಕೂಟವು ಇದೇ ಮಾರ್ಗವನ್ನು ಸೂಚಿಸುತ್ತದೆಯೆಂದು ನಾನು ಮತ್ತೊಮ್ಮೆ ಹೇಳುತ್ತೇನೆ.

ಸಿ.ಪಿ.ಐ. [ಎಂ] ನಿಲುವು

ಶಾಂತಿ ಪ್ರಸ್ತಾಪಗಳ ಈ ಪೂರ್ಣಗಂಟು ಯಾವ ರೀತಿಯದಿದೆಯೆಂದರೆ ಅಸಂನ ಅಧಿಕೃತ ವಲಯಗಳು ಕೂಡಾ ಇತ್ತೀಚಿನ ಸೋವಿಯೆತ್ ಪ್ರಸ್ತಾಪಗಳು "ಒಂದು ಒಳ್ಳೆಯ ಬೆಳವಣಿಗೆ" ಎಂದು ಒಪ್ಪಲೇಬೇಕಾಗಿ ಬಂದಿದೆ. ಗೋರ್ಬಚೆವ್‌ರ ಉದ್ಘೋಷಣೆ "ಮೊದಲ ನೋಟಕ್ಕೆ" "ರಚನಾತ್ಮಕ" ವಾಗಿ ಕಾಣ ಬರುತ್ತಿರುವ ಹಾಗೂ ಆ ಕಾರಣಕ್ಕಾಗಿ ಅದು "ಸ್ವಾಗತಾರ್ಹ" ಎಂದು ಶ್ವೇತಭವನದಿಂದ ಹೊರಬಿದ್ದ ಹೇಳಿಕೆ ನುಡಿದಿದೆ. ಅಸಂಸ್ಥಾದ ಅಧ್ಯಕ್ಷ ರೇಗನ್ ಹಾಗೂ ಅವರ ಮುದ್ದಿನ ಎಸ್ ಡಿ ಐ. ಯೋಜನೆಯ ನೇತೃತ್ವದಲ್ಲಿ ಬಾಹ್ಯಾಕಾಶವನ್ನು ಶಸ್ತ್ರಾಸ್ತ್ರಮಯಗೊಳಿಸಲು ಕಟಿಬದ್ಧರಾದಂತಿರುವ ಅಸಂಸ್ಥಾ ಅಣು ಸಮರೋನ್ಮಾದಿಗಳು ಈ ಸೂಚನೆಗಳನ್ನು ತಿರಸ್ಕರಿಸಿದರೆ ಅದು ಅಸಂನ ಆಡಳಿತದ ಹುಚ್ಚುತನವಲ್ಲದೆ ಮತ್ತೇನೂ ಅಲ್ಲ ಎಂದು ಭೂಮಂಡಲದ ಎಲ್ಲಾ ಸದುದ್ದೇಶಪೂರಿತ ಹಾಗೂ ಶಾಂತಿ ಪ್ರಿಯ ಜನಗಳು ಪರಿಗಣಿಸುತ್ತಾರೆ.

ಹಿಂದುಳಿಕೆಯ ಭಯವೇನೂ ಇಲ್ಲ

ತಥಾಕಥಿತ ತಾರಾಯುದ್ಧ ಕಾರ್ಯಕ್ರಮಕ್ಕೆ ಸೋವಿಯತ್ ಒಕ್ಕೂಟದ ದೃಢ ವಿರೋಧ ಹುಟ್ಟಿಕೊಂಡಿರುವುದು ಭೂಮಿಯ ಮೇಲೆ ಮಾನವ ಕುಲದ ಭವಿಷ್ಯದ ಬಗ್ಗೆ ತನ್ನ ಆತಂಕದಿಂದಾಗಿ ಹಾಗೂ ಪರಮಾಣು ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಕೊನೆಗೊಳಿಸುವುದಕ್ಕಾಗಿ ಎಂಬುದನ್ನು ಸೋವಿಯೆತ್ ಒಕ್ಕೂಟ ಸ್ಪಷ್ಟಪಡಿಸಿದೆ.

ತಾರಾಯುದ್ಧ ಯೋಜನೆಗೆ ಸೋವಿಯತ್ ವಿರೋಧ ಹುಟ್ಟಿಕೊಂಡಿರುವುದು ಯಾವುದೇ ತಾಂತ್ರಿಕ ಹಾಗೂ ವೈಜ್ಞಾನಿಕ ಹಿಂದುಳಿಕೆಯಿಂದೇನೂ ಅಲ್ಲ, ತಾವು ಈ ಸವಾಲನ್ನು ಎದುರಿಸುವ ಸ್ಥಿತಿಯಲ್ಲಿದ್ದೇವೆ ಎಂದು ಸೋವಿಯತ್ ಒಕ್ಕೂಟದ ವಕ್ತಾರರು ಅಸಂನ ಉದ್ರೇಕಿಗಳನ್ನು ಎಚ್ಚರಿಸಿದ್ದಾರೆ. ಸೋವಿಯೆತ್ ವಿರೋಧ ಮೂಡಿ ಬಂದಿರುವುದು ಮಾನವ ಕುಲದ ಭವಿಷ್ಯದ ಮೇಲೆ ಆ ಯೋಜನೆಯ ಅಪಾಯಕಾರೀ ಪರಿಣಾಮಗಳಿಂದಾಗಿ ತಾರಾ ಯುದ್ಧ ಕಾರ್ಯಕ್ರಮವನ್ನು ಜಾರಿಗೊಳಿಸುವ ಕೆಲಸ ಪರಮಾಣು ಅಸ್ತ್ರ ಪತ್ತೋಟ ಕುರಿತಾದ ಅಸಂಸ್ಥಾ ಸೋವಿಯತ್ ಮಾತುಕತೆಗಳ ಸಂಪೂರ್ಣ ಪ್ರಕ್ರಿಯೆಗೇ ಹಾಗೂ ಅತ್ಯಂತ ವಿನಾಶಕಾರೀ ತಾಪ - ಪರಮಾಣು ಜಾಗತಿಕ ಯುದ್ಧವನ್ನು ತಪ್ಪಿಸುವ ಪ್ರಯತ್ನಕ್ಕೆ ಅಪಾಯವೊಡ್ಡುತ್ತದೆ.

ಪ್ರಾಬಲ್ಯವೆಂಬುದು ಭ್ರಾಂತಿ

ಅಸಂಸ್ಥಾ ಸಾಮ್ರಾಜ್ಯಶಾಹಿಗಳ ಮೇಲೆ ಮಿಲಿಟರಿ ಮೇಲುಗೈ ಸಾಧಿಸಲು ತಾನು ಪ್ರಯತ್ನಿಸುತ್ತಿಲ್ಲ, ತಾನು ಇದುವರೆಗೆ ಸಾಧಿಸಿರುವುದು ಮಿಲಿಟರಿ ಅನುರೂಪತೆಯಷ್ಟೆ ಎನ್ನುವುದನ್ನು ಸೋವಿಯತ್ ಒಕ್ಕೂಟ ಮತ್ತೆ ಮತ್ತೆ ಪುನರುಚ್ಚರಿಸಿಕೊಂಡು ಬಂದಿದೆ. ಅದೇ ರೀತಿ ಅಸಂಸ್ಥಾ ಸೋವಿಯತ್ ಒಕ್ಕೂಟದ ಮೇಲೆ ಮಿಲಿಟರಿ ಮೇಲುಗೈ ಸಾಧಿಸಲು ಯತ್ನಿಸುವಾಗ ತಾನು ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ ಎನ್ನುವುದನ್ನು ಕೂಡಾ ಸೋವಿಯೆತ್ ಒಕ್ಕೂಟ ಅಮೆರಿಕಾಕ್ಕೆ ಸ್ಪಷ್ಟಪಡಿಸಿದೆ.

ಸೋವಿಯತ್ ಒಕ್ಕೂಟದ ಈ ಅತ್ಯಂತ ಯುಕ್ತ ಹಾಗೂ ರಚನಾತ್ಮಕ ಪ್ರಸ್ತಾಪಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಅದರ ನಾಟೋ ಮಿಲಿಟರಿ ಕೂಟ ತಿರಸ್ಕರಿಸಿದರೆ, ಅದು ಶಸ್ತ್ರಾಸ್ತ್ರಗಳ ಪೈಪೋಟಿ ಹಾಗೂ ಇತರ ದೇಶಗಳಿಗೆ ಅದರ ಮಾರಾಟ ಈಗ ಅಸಂ ಸಾಮ್ರಾಜ್ಯಶಾಹೀ ಆರ್ಥಿಕದ, ವಿಶೇಷತಃ ದೈತ್ಯ ಗಾತ್ರದ ಅದರ ಮಿಲಿಟರಿ - ಕೈಗಾರಿಕಾ ಸಂಕೀರ್ಣದ ಅವಿಭಾಜ್ಯ ಅಂಗವಾಗಿದೆಯೆಂಬುದನ್ನು ಖಚಿತಪಡಿಸಿದಂತಾಗುತ್ತದೆ. ಬಿಕ್ಕಟ್ಟುಮಯವಾಗಿರುವ ಜಾಗತಿಕ ಸಾಮ್ರಾಜ್ಯಶಾಹಿ ಹತಾಶಗೊಂಡಿದೆ ಮತ್ತು ಅದರಿಂದಾಗಿ ಭೂಮಂಡಲದ ಮೇಲಿನ ಪ್ರಾಬಲ್ಯಕ್ಕಾಗಿ ಯುದ್ಧ ನಡೆಸಲು ಕಾಲು ಕೆರೆಯುತ್ತಿದೆ. ಭೂಮಂಡಲದ ಮೇಲೆ ಪ್ರಾಬಲ್ಯ ಎಂದೂ ಸಾಧ್ಯವಾಗದ ಅದರ ಒಂದು ಗೊಡ್ಡು ಭ್ರಾಂತಿಯಷ್ಟೆ. ಇಂದು ಜಾಗತಿಕ ಸಮಾಜವಾದಿ ಶಕ್ತಿಗಳು ಮತ್ತು ಸೋವಿಯತ್ ಒಕ್ಕೂಟದ ನೈತಿಕ ಹಾಗೂ ಸೈನಿಕ ಶಕ್ತಿ, ಜಾಗತಿಕ ಅಲಿಪ್ತ ಬಣ ಮತ್ತು ಸಮಸ್ತ ಶಾಂತಿಪ್ರಿಯ ಹಾಗೂ ಸ್ವಾತಂತ್ರ್ಯಪ್ರಿಯ ಮಾನವ ಕುಲ ಅಸಂಸ್ಥಾ, ಅದರ ಪರಮಾಣು ಶಸ್ತ್ರ ಪೈಪೋಟಿ ಹಾಗೂ ತಾರಾಯುದ್ಧ ಕಾರ್ಯಕ್ರಮವನ್ನು ತಡೆದು ನಿಲ್ಲಿಸುವಷ್ಟು ಶಕ್ತಿಶಾಲಿಯಾಗಿವೆ. ಈ ಗುರಿ ಸಾಧಿಸುವಲ್ಲಿ ಪ್ರಧಾನ ಕಾರ್ಯದರ್ಶಿ ಗೋರ್ಬಚೆವ್‌ರ ಇತ್ತೀಚಿನ ಹಾಗೂ ಸಮಗ್ರವಾದ ಶಾಂತಿ ಪ್ರಸ್ತಾಪಗಳು ಶಾಂತಿಯ ಪಕ್ಷವರ್ತಿಗಳ ಕೈಗಳಲ್ಲಿ ಖಂಡಿತವಾಗಿಯೂ ಶಕ್ತಿಶಾಲೀ ಆಯುಧವಾಗಲಿದೆ.

[ಪಿ. ಡಿ. ಸಂಪಾದಕೀಯ]

ಕೇರಳದಲ್ಲಿ ಪಕ್ಷದ ವಿದ್ಯಮಾನಗಳು

(6ನೇ ಪುಟದಿಂದ)

ರಾಜಕೀಯ ತಪ್ಪುದಾರಿಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಸಂಘಟನಾತ್ಮಕವಾಗಿ, ಶಿಸ್ತು ಕ್ರಮ ಕೈಗೊಳ್ಳಬೇಕಾಗಬಹುದು. ಆದರೆ ಪಕ್ಷದ ಸಂವಿಧಾನದ ಪ್ರಕಾರ ಶಿಸ್ತು ಕ್ರಮಕೈಗೊಳ್ಳುವುದು, ಸಂಬಂಧಿಸಿದ ಸಂಗಾತಿಯನ್ನು ಒಪ್ಪಿಸುವ ಮತ್ತಿತರ ಕ್ರಮಗಳಿಂದ ದಾರಿಗೆ ತರುವ ಪ್ರಯತ್ನ ವಿಫಲವಾದಾಗ ಮಾತ್ರ. ಮತ್ತು ಶಿಸ್ತು ಕ್ರಮ ಕೈಗೊಂಡಾಗಲೂ, ಸಂಗಾತಿ ಸ್ವತಃ ತಪ್ಪು ಸರಿ ಮಾಡಿಕೊಳ್ಳಲು ಸಹಾಯ ಮುಂದುವರಿಯಬೇಕು."

ಸಂಗಾತಿಗಳನ್ನು ತಿದ್ದಲು ಸಹಾಯ ಮಾಡುವ ಪಕ್ಷದ ಸಂವಿಧಾನಾತ್ಮಕ ವಿಧಿಯ ದೃಷ್ಟಿಯಿಂದ, ರಾಜ್ಯ ಸಮಿತಿಯ ಎರಡು ದಿನದ ಸಭೆಗೆ ರಾಜ್ಯದ ಸಮಿತಿಯ ಕಾರ್ಯದರ್ಶಿ (ಅವರೂ ಪೊ. ಬ್ಯೂರೋ ಸದಸ್ಯ) ಅಲ್ಲದೆ ಮೂವರು ಪೊ. ಬ್ಯೂರೋ ಸದಸ್ಯರು ಭಾಗ ವಹಿಸಿದರು. ಎಲ್ಲಾ ಹಕ್ಕು, ತಪ್ಪಿತಸ್ಥ ಸಂಗಾತಿಗಳಿಗೂ ತಮ್ಮ ಸಮಜಾಯಿಷಿ ನೀಡಲು ಅವಕಾಶ ಕೊಡಲಾಯಿತು. ರಾಜ್ಯ ಸಮಿತಿಯ ಉಳಿದ ಸದಸ್ಯರು, ತಪ್ಪಿತಸ್ಥ ಸಂಗಾತಿಗಳು ಅವಶ್ಯಕ ಸ್ವಯಂ – ವಿಮರ್ಶೆ ಮಾಡಿಲ್ಲ ಎಂದು ಅಭಿಪ್ರಾಯ ಪಟ್ಟರು. ಆದ್ದರಿಂದ ಇಬ್ಬರನ್ನು ಪಕ್ಷದಿಂದ ಅಮಾನತಿನಲ್ಲಿಡುವ, ರಾಜ್ಯ ಸಮಿತಿಯಿಂದ ಇಬ್ಬರನ್ನು ತೆಗೆಯುವ ಮತ್ತು ಉಳಿದ ಸದಸ್ಯರಿಗೆ ಸಾರ್ವಜನಿಕವಾಗಿ ಎಚ್ಚರಿಕೆ ಕೊಡುವ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಪಕ್ಷದಲ್ಲಿ ಆಂತರಿಕ ಚರ್ಚೆಯ ವಿಧಾನಗಳು

ರಾಜ್ಯ ಸಮಿತಿಯ ಈ ನಿರ್ಣಯ "ಅದ್ವಿತೀಯ"ವಾಗಿ ಕಾಣುವುದು; ಉಳಿದ ವರ್ಗಗಳಂತಲ್ಲದೆ, ಕಾರ್ಮಿಕ ವರ್ಗದ ಪಕ್ಷ (ಸ್ಟಾಲಿನ್ ಹೇಳಿರುವಂತೆ) ಮತ್ತು ಗುಂಪುಗಾರಿಕೆಯನ್ನು ಸಹಿಸದ ಐಕ್ಯತೆ, ದೃಢ ಮಾನಸಿಕ ಐಕ್ಯತೆಯ ಸಾಕಾರರೂಪ ಎಂದು ಅರ್ಥವಾಗದವರಿಗೆ ಮಾತ್ರ. "ಪಕ್ಷದ ಉಗ್ರ ಶಿಸ್ತಿ' ನ ಬಗ್ಗೆ ಹೇಳುತ್ತಾ ಸ್ಟಾಲಿನ್ ಹೀಗೆನ್ನುತ್ತಾರೆ ಪಕ್ಷದ ಒಳಗೆ ವಿವಿಧ ಅಭಿಪ್ರಾಯಗಳ ಸಂಘರ್ಷವನ್ನು ಯಾವಾಗಲೂ ಒಳಗೊಂಡಿರುತ್ತದೆ. ಟೀಕೆ ಮತ್ತು ಅಭಿಪ್ರಾಯಗಳ ಸಂಘರ್ಷ ಉಕ್ಕಿನಂತಹ ಶಿಸ್ತಿನ ಪೂರ್ವ ಭಾವಿ ಅಗತ್ಯ. ಶಿಸ್ತು ಎಂದರೆ ಕಣ್ಣುಮುಚ್ಚಿ ಹೇಳಿದಂತೆ ಕೇಳುವುದು ಎಂದು ಎಳ್ಳು ಮೊನೆಯಷ್ಟು ಅರ್ಥವಾಗುವುದಿಲ್ಲ ಬದಲಾಗಿ ಪ್ರಜ್ಞಾಪೂರ್ವಕವಾಗಿ ಮತ್ತು ಸ್ವಯಿಚ್ಛೆಯಿಂದ ಶಿಸ್ತಿಗೆ ಒಪ್ಪಿಕೊಳ್ಳುವುದು ಉಗ್ರ ಶಿಸ್ತಿನ ಪೂರ್ವಭಾವಿ ಅಗತ್ಯ. ಏಕೆಂದರೆ ಪ್ರಜ್ಞಾಪೂರ್ವಕ ಶಿಸ್ತು ಮಾತ್ರ ನಿಜವಾಗಿಯೂ ಉಕ್ಕಿನಂತಹ ಶಿಸ್ತು ಆಗಬಲ್ಲುದು. ಆದರೆ ಅಭಿಪ್ರಾಯದ ಸಂಘರ್ಷಗಳು ಟೀಕೆಗಳೂ ಮುಗಿದ ಮೇಲೆ, ಮತ್ತು ಒಂದು ನಿರ್ಣಯಕ್ಕೆ ಬಂದ ಮೇಲೆ ಚಿತ್ತೈಕ್ಯತೆ ಹಾಗೂ ಕಾರ್ಯೈಕ್ಯತೆ ಅತ್ಯಗತ್ಯ. ಇದಿಲ್ಲದೆ ಪಕ್ಷದಲ್ಲಿ ಉಗ್ರ ಶಿಸ್ತಾಗಲಿ ಐಕ್ಯತೆಯಾಗಲಿ ಕನಸಷ್ಟೇ" (ಲೆನಿನ್‌ವಾದದ ಅಡಿಪಾಯಗಳು ಅಧ್ಯಾಯ 8 – ಪಕ್ಷದ ಕುರಿತು ಭಾಗ –5)

ಸಂವಿಧಾನ ಮೀರಿದ ವರ್ತನೆ

ಪಕ್ಷದ ಸಂವಿಧಾನ ನೀಡಿದ ಅವಕಾಶಗಳನ್ನೆಲ್ಲಾ ಮೀರಿ, ರಾಜ್ಯದ ಅಧಿವೇಶನದ ಮೇಲೆ ಚರ್ಚೆಯನ್ನು ಹೇರಲಾಯಿತು. ಸಂವಿಧಾನದ ಕಲಂ XXI ರ ಪ್ರಕಾರ ಭಿನ್ನಮತೀಯ ಟಿಪ್ಪಣಿ ಮಂಡಿಸಲು ಕೇಂದ್ರ ಸಮಿತಿಯ ಅನುಮತಿಯನ್ನು ಪತ್ರಮುಖೇನ ಕೇಳಿ ರಾಜ್ಯ ಸಮಿತಿಯಲ್ಲಿ ಅಲ್ಪ ಸಂಖ್ಯಾತವಾಗಿರುವ, ಇವರ ಈ ಮನವಿಗೆ ಸಂವಿಧಾನದ ಪ್ರಕಾರ ಅವಕಾಶವಿಲ್ಲ ಅಷ್ಟೇ ಅಲ್ಲ, ಇವರು ಕೇಂದ್ರ ಸಮಿತಿಯ ಉತ್ತರಕ್ಕೆ ಕಾಯದೆ ಭಿನ್ನಮತೀಯ ಟಿಪ್ಪಣಿಯ ಪ್ರತಿಗಳನ್ನು ತೆಗೆಸಿದರು, ಅಧಿವೇಶನಕ್ಕೆ ಆಯ್ಕೆಯಾದ ಪ್ರತಿನಿಧಿಗಳಿಗೆ ಹಂಚಿದರು. ಇದು ಕೇಂದ್ರ ಸಮಿತಿಯ ವಿರುದ್ಧ ಹಾಗೂ ರಾಜ್ಯ ಸಮಿತಿಯ ಬಹು ಜನಾಭಿಪ್ರಾಯದ ವಿರುದ್ಧ ರಾಜ್ಯ ಸಮಿತಿ ಮತ್ತು ಸೆಕ್ರೆಟೇರಿಯಟ್‌ನ ಅಲ್ಪಸಂಖ್ಯಾತ ಸದಸ್ಯರ ಗುಂಪುಗಾರಿಕೆ ಅಲ್ಲದೆ ಬೇರೇನೂ ಅಲ್ಲ.

ರಾಜ್ಯ ಸಮಿತಿ ಮತ್ತು ಸೆಕ್ರೆಟೇರಿಯಟ್‌ನಲ್ಲಿ ಗುಂಪುಗಾರಿಕೆ ನಡೆಸಿದ್ದಲ್ಲದೆ ತಮ್ಮ ಭಿನ್ನಮತೀಯ ಟಿಪ್ಪಣಿಯ ಮೂಲಕ ರಾಜ್ಯ ಅಧಿವೇಶನದಲ್ಲಿ ಭಾಗ ವಹಿಸಿದ ಪ್ರತಿನಿಧಿಗಳಲ್ಲಿ ಗುಂಪುಗಾರಿಕೆ ನಡೆಸಲು ಪ್ರಯತ್ನಿಸಿದರು. ತಾವು ಎಸಗಿದ ಪಕ್ಷ–ವಿರೋಧಿ ಪಾತಕಗಳ ಅಗಾಧತೆಯ ಅರಿವಿನ್ನೂ ಸಂಬಂಧಪಟ್ಟ ಸದಸ್ಯರಿಗೆ ಆಗಿಲ್ಲ ಎಂದು ರಾಜ್ಯ ಸಮಿತಿ ಕಂಡುಕೊಂಡಿತು. ಇದರ ಪರಿಣಾಮವೇ ಅಮಾನತು, ರಾಜ್ಯಸಮಿತಿಯಿಂದ ಉಚ್ಚಾಟನೆ ಮತ್ತು ಸಾರ್ವಜನಿಕ ಖಂಡನೆಯ ಶಿಸ್ತಿನ ಕ್ರಮಗಳು.

ಆದರೆ ಒಂದು ಪ್ರಶ್ನೆ ಇನ್ನೂ ಉಳಿದಿದೆ. ಪಕ್ಷದ ಸಮಿತಿಗಳ ಸಭೆಯ ನಡವಳಿಕೆಯನ್ನು ಬಹಿರಂಗಗೊಳಿಸುವ ರೂಢಿಯಿಲ್ಲದಿರುವಾಗ ಈ ಸಾರ್ವಜನಿಕ ಪ್ರಚಾರ ನೀಡುವ ಅಗತ್ಯವಿತ್ತೆ? ಈ ಘಟನೆಗಳು ಪಕ್ಷದ ಸದಸ್ಯರು ಮತ್ತು ಸದಾ ಬೆಂಬಲ ನೀಡಿರುವ ಜನರಿಂದ ಮುಚ್ಚಿಡಬಾರದಂತಹ ಗಂಭೀರ ಸ್ವರೂಪದ್ದಾದ್ದರಿಂದ ಸಾರ್ವಜನಿಕ ಪ್ರಚಾರ ಅಗತ್ಯವಾಯಿತು. ಪಾರ್ಲಿಮೆಂಟರಿ ಸಂದರ್ಭ ಸಾಧಕತನ ಮತ್ತು ಸಂಘಟನೆಯಲ್ಲಿ ಗುಂಪುಗಾರಿಕೆ ಇವೆರಡೂ ಗಂಭೀರ ಸ್ವರೂಪದ ದಿಕ್ಕು ತಪ್ಪಿಸುವ ತಪ್ಪುಗಳಾದ್ದರಿಂದ ತಪ್ಪಿತಸ್ಥರಿಗೆ ಶಿಕ್ಷಿಸುವುದು ಮಾತ್ರವಲ್ಲದೆ ಪಕ್ಷದ ಸದಸ್ಯರಿಗೆ ಮತ್ತು ಪಕ್ಷದ ಬೆಂಬಲಿಗ ಜನಸಾಮಾನ್ಯರಿಗೆ ವ್ಯವಸ್ಥಿತ ಶಿಕ್ಷಣ ನೀಡಬೇಕಾದ್ದು ಅತಿ ಮುಖ್ಯ. ನಡೆದ ಎಲ್ಲಾ ಸಂಗತಿಗಳ ವಿವರಗಳು, ಕಾರ್ಮಿಕ ವರ್ಗದ ಪಕ್ಷದಲ್ಲಿ ನಡೆಯಗೊಡಬಾರದ್ದು ಎಂಬುದನ್ನು ಪಕ್ಷದ ಎಲ್ಲಾ ಸದಸ್ಯರಿಗೆ ಮತ್ತು ಮಿಲಿಯಗಟ್ಟಲೆ ಬೆಂಬಲಿಗರಿಗೆ ಸಾರಿ ಹೇಳಬೇಕು. ○

ಮುಂದಿನ ಸಂಚಿಕೆಯಲ್ಲಿ — "ಕೇರಳ ರಾಜ್ಯ ಸಮಿತಿಯ ಸಭೆಯಲ್ಲಿ ಬಿ.ಟಿ.ಆರ್." ಎಂಬ ಲೇಖನವನ್ನು ಪ್ರಕಟಿಸಲಾಗುವುದು.

ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ

ಕುಂದಾಪುರದಲ್ಲಿ ಚರಿತ್ರಾರ್ಹ ಸಭೆ

ಫೆಬ್ರವರಿ 8 ರಂದು ನಡೆದ ಸಿ.ಐ.ಟಿ.ಯು ರಾಜ್ಯ ಕಾರ್ಯಕಾರಿ ಸಮಿತಿ ಸಭೆ ಹಾಗೂ 9 ಹಾಗೂ 10 ರಂದು ನಡೆದ ರಾಜ್ಯ ಮಂಡಳಿ ಸಭೆಯ ಅಂತ್ಯದಲ್ಲಿ ಕುಂದಾಪುರದಲ್ಲಿ ಏರ್ಪಡಿಸಿದ ಮೆರವಣಿಗೆ, ಸಭೆಗಳು ಕುಂದಾಪುರದ ಇತಿಹಾಸದಲ್ಲೇ ಅತ್ಯಪೂರ್ವವಾಗಿದ್ದುವೆಂದು ತಿಳಿದು ಬಂದಿದೆ. ಮೆರವಣಿಗೆಯ ಮುಂಭಾಗದಲ್ಲಿ ಸಮವಸ್ತ್ರಧಾರಿ ಸಾಲು ಸಾಲಾಗಿ ಹೊರಟಿದ್ದವರಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದದ್ದು, ಅತಿದೊಡ್ಡ ಸಂಖ್ಯೆಯಲ್ಲಿ ಭಾಗ ವಹಿಸಿದ್ದ ಕಾರ್ಮಿಕರು ನೆರೆದವರಲ್ಲಿ ಉತ್ಸಾಹವನ್ನು ಹೊಮ್ಮಿಸಿದರು.

ರಾಜ್ಯದ ಮೂಲೆ ಮೂಲೆಗಳಿಂದ ಬಂದ ರಾಜ್ಯ ಮಂಡಲಿ ಸದಸ್ಯರುಗಳಿಗೆ ಸ್ಫೂರ್ತಿದಾಯಕವಾಗಿತ್ತು. ಸುವ್ಯವಸ್ಥಿತವಾಗಿ, ಶಿಸ್ತುಬದ್ಧವಾಗಿ ಏರ್ಪಡಿಸಿದ್ದ ಸಭೆ, ಬಹಿರಂಗ ಸಭೆಗಳಲ್ಲಿ ಸಿ.ಐ.ಟಿ.ಯು ಅಧ್ಯಕ್ಷ ಸೂರ್ಯನಾರಾಯಣ ರಾವ್, ಪ್ರಧಾನ ಕಾರ್ಯದರ್ಶಿ ಸಿ ನಂಜುಂಡಪ್ಪ, ಕಾರ್ಯದರ್ಶಿಗಳಾದ ವಿ ಜೆ ಕೆ ನಾಯರ್, ಬಿ ಮಾಧವ ಉಪಾಧ್ಯಕ್ಷರುಗಳಾದ ಮೂಸಬ್ಬ, ದಸ್ತಗೀರ್, ಹಾಗೂ ಕೆ ಆರ್. ಶ್ರೀಯಾನ್, ಪಿ. ರಾಮಚಂದ್ರರಾವ್ ಮೊದಲಾಗಿದವರು ಭಾಗವಹಿಸಿದ್ದರು.

ಮಾರ್ಚ್ 3ರಂದು ವಿಧಾನ ಸೌಧ ಚಲೊ

ಸಿ ಐ ಟಿ ಯು ರಾಜ್ಯ ಮಂಡಳಿ ಕಾರ್ಮಿಕರ ಹೋರಾಟಕ್ಕೆ ನೆರವಾಗುವ ಅನೇಕ ನಿರ್ಣಯಗಳನ್ನು ಅಂಗೀಕರಿಸಿತು. ಮುಖ್ಯವಾಗಿ ಕಳೆದ ಐದಾರು ವರ್ಷಗಳಿಂದ ನೆನೆಗುದಿಯಲ್ಲಿ ಬಿದ್ದಿರುವ ಕರ್ನಾಟಕ ಜನತೆಯ ಕಾಲುಭಾಗವಾದ ದೀನ ಸ್ಥಿತಿಯಲ್ಲಿ, ಅರಕ್ಷಿತರಾಗಿ ಬದುಕುತ್ತಿರುವ ಅಸಂಘಟಿತ ಕಾರ್ಮಿಕ ವರ್ಗಕ್ಕೆ ಕನಿಷ್ಠ ಕೂಲಿಯನ್ನು ಖಾತರಿಗೊಳಿಸುವ ಹೋರಾಟದ ಮುಂದಿನ ಹಂತವಾಗಿ 25ಸಾವಿರಕ್ಕೂ ಹೆಚ್ಚು ಕಾರ್ಮಿಕರ ವಿಧಾನಸೌಧ ಚಲೊವನ್ನು ಸಂಘಟಿಸಬೇಕೆಂದು ಮಾ 3ರಂದು ಸಿ.ಐ.ಟಿಯು ರಾಜ್ಯಮಂಡಳಿ ತೀರ್ಮಾನಿಸಿತು.

(ವಿವರಗಳಿಗೆ ಮುಂದಿನ ಸಂಚಿಕೆ ನೋಡಿ)

ಫೆ. 19 ರಂದು ರಾಜ್ಯವ್ಯಾಪಿ ಪ್ರತಿಭಟನೆ

(1ನೇ ಪುಟದಿಂದ)

ಯಶಸ್ವಿ ಮಾಡಿದ ದೆಹಲಿ, ಬಂಗಾಳ, ತ್ರಿಪುರಾಗಳ ಕಾರ್ಮಿಕ ವರ್ಗವನ್ನು, ಜನತೆಯನ್ನು ಅಭಿನಂದಿಸಿವೆ.

ಹಾಗೆಯೇ ಇತರ ರಾಜ್ಯಗಳಲ್ಲಿ ಕೂಡ ರಾಜ್ಯವ್ಯಾಪಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಕೇರಳದಲ್ಲಿ 26 ರಂದು ಕೇಂದ್ರ ಕಛೇರಿಗಳ ಪಿಕೆಟಿಂಗ್ ಯೋಜಿಸಲಾಗಿದೆ. ಆಂಧ್ರ ಪ್ರದೇಶದಲ್ಲಿ ವರದಿ ಮಾಡಿದಂತೆ ದಿನಾಂಕ 4 ರಿಂದಲೇ ಪ್ರತಿಭಟನೆಗಳು 24 ಗಂಟೆಗಳ ಅವಧಿಯಲ್ಲಿ ಯೋಜಿತವಾಗಿ ಯಶಸ್ವಿಯಾಗಿ ನಡೆಯುತ್ತಿವೆ.

ಪಾಲಿಟ್‌ಬ್ಯೂರೋ, ಸಿ.ಐ.ಟಿ.ಯು. ಕರೆ

ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ, ಜನರ ದೈನಂದಿನ ಜೀವನದ ಮೇಲೆ ಈ ಮೃಗೀಯ ಆಕ್ರಮಣವನ್ನು ಸಹಿಸಲಾರೆವೆಂದು ಜನ ಸಮುದಾಯ ಬಂದ್‌ಗಳಿಗೆ ಹಾರ್ದಿಕ ಬೆಂಬಲ ನೀಡಿ ಎಚ್ಚರಿಕೆಯಿತ್ತಿದ್ದಾರೆ. ಕೇಂದ್ರ ಸರ್ಕಾರದ ನೀತಿಗಳಿಗೆ ಎದುರಾಗಿ ಜನ ಅಣಿನೆರೆದಿರುವುದನ್ನು ಇದು ವ್ಯಕ್ತಪಡಿಸುತ್ತದೆ ಎಂದರೆ, ಜನ ಜೀವನದ ದುಂತಕ್ಕೆ ಕಾರಣವಾಗಿರುವ ಕೇಂದ್ರ ಸರ್ಕಾರದ ಕ್ರಮ ಹಿಂತೆಗೆಯಬೇಕೆಂದು ದೇಶದ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಸಂಘಟಿತವಾಗಿ ಐಕ್ಯ ಹೋರಾಟ ನಡೆಸಬೇಕೆಂದು ಸಿ ಐ ಟಿ.ಯು ಕರೆ ನೀಡುತ್ತದೆ.

ಸಿಐಟಿಯು ಅಧ್ಯಕ್ಷ ಬಿ.ಟಿ. ರಣದಿವೆಯವರು, ಎನ್.ಸಿ.ಸಿ. ನೀಡಿದ "ಅಖಿಲ ಭಾರತ ಪ್ರತಿಭಟನಾ" ದಿನದ ಕರೆಯನ್ನು ಯಶಸ್ವಿಗೊಳಿಸಲು ಸಿಐಟಿಯು ಘಟಕಗಳಿಗೆ ಕರೆ ನೀಡುತ್ತಾ, ಜನರ ಈ ಪ್ರತಿಭಟನೆಯಿಂದ ಪಾಠಕಲಿತು ಬೆಲೆ ಏರಿಕೆಯನ್ನು ಹಿಂದೆಗೆಯದಿದ್ದರೆ ದೀರ್ಘವಾದ ಪ್ರಕ್ಷೋಭೆ ಹಾಗೂ ಹೋರಾಟಗಳಿಗೆ ಎಡೆ ಮಾಡುವುದೆಂದು ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

(1ನೇ ಪುಟದಿಂದ)

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ವಿಧಾನ ಸಭೆಯ ಒಳಗೂ ಹೊರಗೂ ಈಗಾಗಲೇ ಬಾಟ್ಲಿಂಗ್ ಪ್ರಶ್ನೆಯ ಮೇಲೆ ಹೈಕೋರ್ಟ್ ಕೊಟ್ಟ ವಿಧಿಯ ಕುರಿತು ರಾಮಕೃಷ್ಣ ಹೆಗಡೆಯವರು ರಾಜಿನಾಮೆ ನೀಡುವ ಅಗತ್ಯವಿಲ್ಲವೆಂದು ಹೇಳಿಕೆಯನ್ನಿತ್ತಿತ್ತು. ಅಬಕಾರಿ ಮಂತ್ರಿಯ ರಾಜೀನಾಮೆಯನ್ನು ಪಡೆದು ಅಬಕಾರಿ ಕಮೀಷನರರವರನ್ನು ಅಮಾನತುಗೊಳಿಸಿ, ಇಡೀ ಬಾಟ್ಲಿಂಗ್ ಕೆಲಸವನ್ನು ಸರ್ಕಾರದ ಅಧೀನದಲ್ಲಿರುವ ಮೈಸೂರು ಶುಗರ್ ಕಂಪನಿಗೆ ಕೊಡಬೇಕೆಂದು ಅದು ಅಭಿಪ್ರಾಯ ಪಟ್ಟಿತ್ತು

ಶ್ರೀರಾಮಕೃಷ್ಣ ಹೆಗಡೆಯವರು ಮೌಲ್ಯಾಧರಿತ ರಾಜಕೀಯ ಅನುಸರಿಸುವ ಇಚ್ಛೆ ತೋರಿಸಿದ್ದರೂ, ಅವರು ಈ ಪ್ರಶ್ನೆಯಲ್ಲಿ ರಾಜೀನಾಮೆ ಕೊಡುವ ಅವಶ್ಯಕತೆಯಿಲ್ಲ.

ಆದ್ದ ಕಾರಣ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟೇರಿಯೇಟ್ ರಾಜ್ಯದ ಮತ್ತು ದೇಶದ ಈಗಿನ ಸಂದಿಗ್ಧ ಪರಿಸ್ಥಿತಿಗಳಲ್ಲಿ ಜನತಾ ಪಕ್ಷದ ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಶ್ರೀರಾಮಕೃಷ್ಣ ಹೆಗಡೆಯವರು ತಮ್ಮ ರಾಜೀನಾಮೆಯನ್ನು ವಾಪಸು ಪಡೆದುಕೊಂಡು ಮುಖ್ಯಮಂತ್ರಿಯಾಗಿ ಮುಂದುವರಿಸಿಕೊಂಡು ಹೋಗಬೇಕೆಂದು ದೃಢವಾಗಿ ಅಭಿಪ್ರಾಯ ಪಡುತ್ತದೆ.

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V. Temple Street, Sultanpet, Bangalore-560053 Editorial and manageriel office, L-56, K. V. TempleStreet, Sultanpet, B-53Phone : 75331
Editor P. Ramach andra Rao Managing Editor : N.K. Upadhyaya